ದಿನಾಂಕ: 05-02-2024

## :-: ಪತ್ರಿಕಾ ಪ್ರಕಟಣೆ :-:

## ಕೊಲೆ ಮಾಡಿ ಯಾವುದೇ ಸುಳಿವು ನೀಡದೆ ತಲೆ ಮರೆಸಿಕೊಂಡಿದ್ದ ಆರೋಪಿಗಳ ಬಂಧನ.




**ದಿನಾಂಕ:07.12.2023 ರ ರಾತ್ರಿಯಿಂದ ದಿನಾಂಕ:08.12.2023 ರ ಬೆಳಗ್ಗೆ 10 ಗಂಟೆಯ ಮದ್ಯದ ಅವಧಿಯಲ್ಲಿ ಸುಮಾರು 35 ವರ್ಷ ಪ್ರಾಯದ ಗಂಡಸನ್ನು ಯಾರೋ ದುಷ್ಕರ್ಮಿಗಳು ಯಾವುದೋ ಉದ್ದೇಶದಿಂದ ಯಾವುದೋ ಹರಿತವಾದ ಆಯುಧದಿಂದ ಹೊಡೆದು ಕೊಲೆ ಮಾಡಿ ದೊಡ್ಡನಾರವಂಗಲ ಕೆರೆಯ ನೀರಿನಲ್ಲಿ ಹಾಕಿರುತ್ತಾರೆ. ಮುಂದಿನ ಕಾನೂನು ಕ್ರಮ ಕೈಗೊಳ್ಳಿ ಎಂದು ನೀಡಿದ ದೂರನ್ನು ಪಡೆದು ಬೆಳ್ಳಾವಿ ಪೊಲೀಸ್ ಠಾಣೆಯ ಮೊ.ನಂ:98/2023 ಕಲಂ:302 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತೆ**

ಸದರಿ ಪ್ರಕರಣವನ್ನು ಪತ್ತೆ ಮಾಡಲು **ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಅಶೋಕ್ ಕೆ.ವಿ ಐ.ಪಿ.ಎಸ್ ರವರ ನಿರ್ದೇಶನದಲ್ಲಿ ಮತ್ತು ತುಮಕೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರವರಾದ ಶ್ರೀ ವಿ.ಮರಿಯಪ್ಪ, ಕೆ.ಎಸ್.ಪಿ.ಎಸ್, ಶ್ರೀ ರಾಮಚಂದ್ರಪ್ಪ ಕೆ.ಎಸ್.ಪಿ.ಎಸ್ ಹಾಗೂ ತುಮಕೂರು ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಕೆ.ಆರ್ ಚಂದ್ರಶೇಖರ್ ಕೆ.ಎಸ್.ಪಿ.ಎಸ್.** ರವರುಗಳ ಮಾರ್ಗದರ್ಶನದಲ್ಲಿ ತುಮಕೂರು ಗ್ರಾಮಾಂತರ ವೃತ್ತ ನಿರೀಕ್ಷಕರಾದ ಲಕ್ಷ್ಮೀಕಾಂತಯ್ಯ ಜಿ ರವರ ನೇತೃತ್ವದಲ್ಲಿ ಸಿಬ್ಬಂದಿಯನ್ನೊಳಗೊಂಡ ವಿಶೇಷ ತಂಡವನ್ನು ರಚಿಸಿದ್ದು, ಸದರಿ ತಂಡವು ಕೃತ್ಯವೆಸಗಿದ್ದ ಎ1- ಉಸ್ಮಾನ್ ಅನ್ಸಾರಿ @ ಬ್ರೋ ಬಿನ್ ರಜಾವುದ್ದೀನ್ ಅನ್ಸಾರಿ, 24 ವರ್ಷ, ಮುಸ್ಲಿಂ ಜನಾಂಗ, ವೆಲ್ಡಿಂಗ್ ಕೆಲಸ, ಮತ್ತು ಆಟೋ ಚಾಲಕ, ವಾಸ: ಅಪ್ಪು ಹೋಟೆಲ್ ಹಿಂಭಾಗ, ಹೆಗ್ಗೆರೆ, ಕಸಬಾ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಎ2- ನಿಶ್ಚಿತ್ ಎನ್ ಬಿನ್ ನಾಗೇಶ್ ಆರ್ 20 ವರ್ಷ, ಪರಿಶಿಷ್ಠ ಜಾತಿ, ಡ್ರೈವರ್ ಕೆಲಸ, ವಾಸ; ಹೊಸಬಡಾವಣೆ ಹೆಂಜಾರಪ್ಪ ಲೇಔಟ್, ಹೆಗ್ಗೆರೆ, ಕಸಬಾ ಹೋಬಳಿ, ತುಮಕೂರು ತಾಲ್ಲೂಕು ರವರುಗಳನ್ನು ಪತ್ತೆ ಮಾಡಿ, ದಸ್ತಗಿರಿ ಮಾಡಿ, ಆರೋಪಿಗಳು ಪಿರ್ಯಾದಿರವರಿಂದ ಕಿತ್ತುಕೊಂಡು ಹೋಗಿದ್ದ KA 02 AD 0792 ನೇ ಕಾರು, ಒಂದು ಮೊಬೈಲ್ ಹಾಗು ಎಟಿಎಂ ಮತ್ತು ಡಿಎಲ್ ಇರುವ ಪರ್ಸನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಹಾಗು ಆರೋಪಿಗಳು ಕೊಲೆ ಮಾಡಲು ಉಪಯೋಗಿಸಿದ ಚಾಕು ಮತ್ತು ಕಾರಿನ ಜಾಕನ್ನು ವಶಪಡಿಸಿಕೊಂಡಿರುತ್ತಾರೆ.

ಸದರಿ ಪ್ರಕರಣದ ಆರೋಪಿಳನ್ನು ಪತ್ತೆ ಮಾಡಲು ಶ್ರಮಿಸಿದ **ತುಮಕೂರು ಗ್ರಾಮಾಂತರ ವೃತ್ತ ನಿರೀಕ್ಷಕರಾದ ಲಕ್ಷ್ಮೀಕಾಂತಯ್ಯ ಜಿ ರವರು ಹಾಗು ಪಿ.ಎಸ್.ಐ ರವರುಗಳಾದ ಮೋಹನ್ ಎನ್, ರಾಮಚಂದ್ರಯ್ಯ ಮತ್ತು ಎ.ಎಸ್.ಐ ಮೋಹನ್ ಕುಮಾರ್ ಸಿಬ್ಬಂದಿಯವರಾದ ನರಸಿಂಹರಾಜು ಡಿ.ಆರ್, ನಾಗರಾಜು, ಈರಣ್ಣ ಜಿ, ರಮೇಶ್, ಮಹೇಶ್, ಮಧು, ಚಿದಾನಂದ ಕೆ.ಎನ್, ಪರಮೇಶ್, ಪಕೃದ್ದೀನ್, ರವರುಗಳನ್ನು ಹಾಗು ಜಿಲ್ಲಾ ಪೊಲೀಸ್ ಕಛೇರಿಯ ನರಸಿಂಹರಾಜು, ರಮೇಶ್ ರವರುಗಳ** ತಂಡವನ್ನು ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರವರು ಅಭಿನಂದಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಕಛೇರಿ,
ತುಮಕೂರು ಜಿಲ್ಲೆ,

# ಪತ್ರಿಕಾ ಪ್ರಕಟಣೆ.

ದಿನಾಂಕ. 01–02–2024

## "ತುರುವೇಕೆರೆ ಪಟ್ಟಣದಲ್ಲಿ ಗಾಂಜಾ ವ್ಯಾಪಾರದಲ್ಲಿ ತೊಡಗಿದ್ದ ಆರೋಪಿತರ ಬಂಧನ"

ತುರುವೇಕೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಪಟ್ಟಣದ ಗಾಂಧಿನಗರದ ಕೃಷ್ಣ ಟಾಕೀಸ್ ಹಿಂಭಾಗ ಇರುವ ಖಾಲಿ ಲೇಔಟ್‌ನಲ್ಲಿ ದಿನಾಂಕ:–19/01/2024 ರಂದು ಸಂಜೆ 6.00 ಗಂಟೆಯಲ್ಲಿ ದಾಳಿ ಮಾಡಿದ್ದು, (1) ಸಾದಿಕ್ ಪಾಷ ಬಿನ್ ಲೇಟ್ ಸರ್ದಾರ್ ಪಾಷ, 32 ವರ್ಷ, ರೈಲ್ವೆ ಸ್ಟೇಷನ್ ರೋಡ್, ಜ್ಯೋತಿ ನಗರ, 1 ನೇ ಕ್ರಾಸ್ ಗುಬ್ಬಿ ಟೌನ್ (2) ಮಹಮದ್ ಖಲೀಲ್ ಬಿನ್ ಮಹಮದ್ ನಸೀರ್, 24 ವರ್ಷ, 3 ನೇ ಕ್ರಾಸ್, ಮಸೀದಿ ಮುಂಭಾಗದ ರಸ್ತೆ, ದೇವೆಗೌಡ ಬಡಾವಣೆ, ತುರುವೇಕೆರೆ ಟೌನ್ (3) ಮುಬಾರಕ್ ಬಿನ್ ಕಲೀಲ್ ಅಹಮದ್ 24 ವರ್ಷ, ನೊಣವಿನಕೆರೆ, ತಿಪಟೂರು ತಾಲ್ಲೂಕುರವರುಗಳಿಂದ 490 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡಿರುತ್ತದೆ. ಈ ಬಗ್ಗೆ ತುರುವೇಕೆರೆ ಪೊಲೀಸ್ ಠಾಣೆಯಲ್ಲಿ ಮೊ.ನಂ–15/2024 ಕಲಂ–20(ಬಿ) ಎನ್.ಡಿ.ಪಿ.ಎಸ್ ಆಕ್ಟ್ ರೀತ್ಯ ಪ್ರಕರಣ ದಾಖಲಿಸಿ ಆರೋಪಿಗಳನ್ನು ದಸ್ತಗಿರಿ ಮಾಡಿ ಘನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತದೆ.

ಸದರಿ ಪ್ರಕರಣದಲ್ಲಿ ಆರೋಪಿತರನ್ನು ಪತ್ತೆ ಮಾಡುವಲ್ಲಿ ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಅಶೋಕ್ ಕೆ.ವಿ ರವರ, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿ. ಮರಿಯಪ್ಪ ರವರ ಮತ್ತು ರಾಮಚಂದ್ರಪ್ಪ ರವರ ಮಾರ್ಗದರ್ಶನದಲ್ಲಿ, ಕುಣಿಗಲ್ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಲಕ್ಷ್ಮೀಕಾಂತ್ ರವರ ನೇತೃತ್ವದಲ್ಲಿ ತುರುವೇಕೆರೆ ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ಆದ ಲೋಹಿತ್ ಬಿ.ಎನ್, ತುರುವೇಕೆರೆ ಪೊಲೀಸ್ ಠಾಣಾ ಪಿ.ಎಸ್.ಐ ಸಂಗಪ್ಪ ಮೇಟಿ, ದಂಡಿನಶಿವರ ಪಿ.ಎಸ್.ಐ ಚಿತ್ತರಂಜನ್, ಹಾಗೂ ಸಿಬ್ಬಂದಿಗಳಾದ ಗುರುಮೂರ್ತಿ, ಧನಂಜಯ್, ಮಲ್ಲಿಕಾರ್ಜುನ್, ರಾಜಕುಮಾರ್ ವಗ್ಗೇರಿರವರು ಆರೋಪಿ ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದು, ತನಿಖಾ ತಂಡವನ್ನು ಮಾನ್ಯ ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ ರವರು ಶ್ಲಾಘಿಸಿರುತ್ತಾರೆ.

ಪೊಲೀಸ್ ಅಧೀಕ್ಷಕರ ಕಛೇರಿ,
ತುಮಕೂರು,

ಕರ್ನಾಟಕ ರಾಜ್ಯ ಪೊಲೀಸ್

(ಪೊಲೀಸ್ ಇಲಾಖೆ)

ತುರುವೇಕೆರೆ ಪೊಲೀಸ್ ಠಾಣೆ, ತುರುವೇಕೆರೆ ವೃತ್ತ, ಕುಣಿಗಲ್ ಉಪವಿಭಾಗ, ತುಮಕೂರು ಜಿಲ್ಲೆ,

# ಪತ್ರಿಕಾ ಪ್ರಕಟಣೆ.

ದಿನಾಂಕ:26/12/2023

## "ರಾತ್ರಿ ಸಮಯದಲ್ಲಿ ವಾಹನ ಅಡ್ಡಹಾಕಿ ಹಣ, ಮೊಬೈಲ್ ಕಿತ್ತುಕೊಂಡು ರಾಬರಿ ಮಾಡುತ್ತಿದ್ದ ಆರೋಪಿಯ ಬಂಧನ."

ತುರುವೇಕೆರೆ ತಾಲ್ಲೂಕು, ತುರುವೇಕೆರೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ದಿನಾಂಕ:-20-12-23 ರಂದು ಪಿರ್ಯಾದಿ ಪ್ರಕಾಶ್ ಬಿನ್ ರಾಮೇಗೌಡ, ವ್ಯಾಪಾರ, ಹಿರೆಮರಳಿ, ಪಾಂಡವಪುರ ತಾಲ್ಲೂಕು ರವರು ಪಾಂಡವಪುರದಿಂದ ಬಳ್ಳಾರಿಗೆ ತಮ್ಮ ಬಾಬ್ತು ಕೆ.ಎ-11 ಸಿ-0987 ನೇ ಐಶರ್ ವಾಹನದಲ್ಲಿ ಬೆಲ್ಲದ ಲೋಡ್ ತೆಗೆದುಕೊಂಡು ರಾತ್ರಿ 10-30 ಗಂಟೆಗೆ ಪಾಂಡವಪುರ ಬಿಟ್ಟು ಮಧ್ಯರಾತ್ರಿ ಸುಮಾರು 1-30 ಗಂಟೆ ಸಮಯದಲ್ಲಿ ತುರುವೇಕೆರೆ ಟೌನ್ ಮುನಿಯೂರು ಗೇಟ್ ಸಮೀಪ ಬಂದಾಗ ರಸ್ತೆಗೆ ಅಡ್ಡಲಾಗಿ ಒಂದು ಪ್ಯಾಸೆಂಜರ್ ಆಟೋ ನಿಂತಿದ್ದು, ನಾವು ನಮ್ಮ ವಾಹನ ನಿಲ್ಲಿಸಲಾಗಿ ಅದರಲ್ಲಿದ್ದ 25-35 ವಯಸ್ಸಿನ ಮೂರು ಅಪರಿಚಿತರು ಬಂದು ಅಡ್ಡಹಾಕಿ ಹೆದರಿಸಿ ಪಿರ್ಯಾದಿಯ ಬಳಿ ಇದ್ದ 50 ಸಾವಿರ ಬೆಲೆ ಬಾಳುವ ಸ್ಯಾಮ್ ಸಾಂಗ್ ಮೊಬೈಲ್, ಜೇಬಿನಲ್ಲಿದ್ದ 100/- ರೂ ಹಣವನ್ನು ನಿನ್ನನ್ನು ಇಲ್ಲೆ ಹೊಡೆದು ಮುಚ್ಚಿ ಹಾಕುತ್ತೇವೆಂದು ಹೆದರಿಸಿ ಸುಲಿಗೆ ಮಾಡಿಕೊಂಡು ಹೋಗಿರುವ ಬಗ್ಗೆ ದಿನಾಂಕ:23/12/2023 ರಂದು ತಡವಾಗಿ ಠಾಣೆಗೆ ಹಾಜರಾಗಿ ನೀಡಿದ ದೂರಿನ ಮೇರೆಗೆ ತುರುವೇಕೆರೆ ಠಾಣೆಯಲ್ಲಿ ಮೊ.ನಂ:308/2023 ಕಲಂ:392 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ.

ಈ ಪ್ರಕರಣವನ್ನು ಪತ್ತೆ ಹಚ್ಚಲು ಕುಣಿಗಲ್ ಉಪವಿಭಾಗ ಪೊಲೀಸ್ ಉಪಾಧೀಕ್ಷಕರಾದ ಲಕ್ಷ್ಮೀಕಾಂತ್ ರವರ ನೇತೃತ್ವದಲ್ಲಿ ತುರುವೇಕೆರೆ ವೃತ್ತದ ಸಿ.ಪಿ.ಐ ಲೋಹಿತ್.ಬಿ.ಎನ್ ರವರ ನೇತೃತ್ವದಲ್ಲಿ ಕ್ರೈಂ ತಂಡವನ್ನು ರಚಿಸಿದ್ದು, ಆರೋಪಿ ಪತ್ತೆ ಬಗ್ಗೆ ವಿಶೇಷ ಕಾರ್ಯಚರಣೆಯ ಕೈಗೊಂಡು ಪ್ರಕರಣದಲ್ಲಿ ದಿನಾಂಕ:24/12/2023 ರಂದು ಒಬ್ಬ ಆರೋಪಿಯನ್ನು ದಸ್ತಗಿರಿ ಮಾಡಿರುತ್ತೆ. ಕಳವು ಮಾಡಿಕೊಂಡು ಹೋಗಿದ್ದ 05 ದ್ವಿಚಕ್ರ ವಾಹನಗಳನ್ನು ಮತ್ತು 06 ಮೊಬೈಲ್‌ಗಳನ್ನು ವಶಪಡಿಸಿಕೊಂಡಿರುತ್ತೆ. ಉಳಿದ ಆರೋಪಿಗಳು ತಲೆಮರೆಸಿಕೊಂಡಿರುತ್ತಾರೆ. ಪತ್ತೆ ಕಾರ್ಯ ಮುಂದುವರೆದಿರುತ್ತೆ.

### ಆರೋಪಿಯ ವಿವರ.

ಸುರೇಶ ಬಿನ್ ರಾಜಪ್ಪ, 35 ವರ್ಷ, ಆಟೋ ಡ್ರೈವರ್ ಕೆಲಸ, ರಾಘವೇಂದ್ರ ನಗರ, ತುರುವೇಕೆರೆ ಟೌನ್ ಸ್ವಂತ ವಿಳಾಸ-ದ್ವಾರನಹಳ್ಳಿ, ಕಸಬಾ ಹೋಬಳಿ, ತುರುವೇಕೆರೆ ತಾಲ್ಲೂಕು.

ಸದರಿ ಪ್ರಕರಣದ ಆರೋಪಿಯನ್ನು ಪತ್ತೆ ಮಾಡುವಲ್ಲಿ ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಅಶೋಕ್.ಕೆ.ವಿ, ಐ.ಪಿ.ಎಸ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರುಗಳಾದ ವಿ.ಮರಿಯಪ್ಪ ಮತ್ತು ಎನ್.ಹೆಚ್.ರಾಮಚಂದ್ರಪ್ಪ ರವರ ಮಾರ್ಗದರ್ಶನದಲ್ಲಿ ಕುಣಿಗಲ್ ಉಪವಿಭಾಗ ಪೊಲೀಸ್ ಉಪಾಧೀಕ್ಷಕರಾದ ಲಕ್ಷ್ಮೀಕಾಂತ್ ರವರ ನೇತೃತ್ವದಲ್ಲಿ ತುರುವೇಕೆರೆ ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ಆದ

ಲೋಹಿತ್.ಬಿ.ಎನ್, ತುರುವೇಕೆರೆ ಠಾಣಾ ಪ್ರಭಾರ ಪಿ.ಎಸ್.ಐ ಚಿತ್ತರಂಜನ್, ಸಿಬ್ಬಂದಿಗಳಾದ ಗುರುಮೂರ್ತಿ ಮಲ್ಲಿಕಾರ್ಜುನ್, ರಾಜಕುಮಾರ್ ವಗ್ಗೇರಿ ರವರು ಆರೋಪಿ ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದು ತನಿಖಾ ತಂಡವನ್ನು ಮಾನ್ಯ ಪೊಲೀಸ್ ಅಧೀಕ್ಷಕರು, ತುಮಕೂರು ರವರು ಶ್ಲಾಘಿಸಿರುತ್ತಾರೆ.

**ಜಿಲ್ಲಾ ಪೊಲೀಸ್ ಕಛೇರಿ**
**ತುಮಕೂರು.**

## ಆರೋಪಿಯಿಂದ ವಶಪಡಿಸಿಕೊಂಡಿರುವ ಮಾಲುಗಳ ವಿವರ





**ಕರ್ನಾಟಕ ರಾಜ್ಯ ಪೊಲೀಸ್**
**(ಪೊಲೀಸ್ ಇಲಾಖೆ)**
**ದಂಡಿನಶಿವರ ಪೊಲೀಸ್ ಠಾಣೆ, ತುರುವೇಕೆರೆ ವೃತ್ತ, ಕುಣಿಗಲ್ ಉಪವಿಭಾಗ, ತುಮಕೂರು ಜಿಲ್ಲೆ,**

# ಪತ್ರಿಕಾ ಪ್ರಕಟಣೆ.

**ದಿನಾಂಕ:26/12/2023**

## "ಮಹಿಳೆಗೆ ಲೈಂಗಿಕ ಕಿರುಕುಳ ನೀಡಿ ಹೆದರಿಸಿ ಮೊಬೈಲ್ ಕಿತ್ತುಕೊಂಡು ಹೋಗಿದ್ದ ಆರೋಪಿಗಳ ಬಂಧನ."

ತುರುವೇಕೆರೆ ತಾಲ್ಲೂಕು, ದಂಡಿನಶಿವರ ಪೊಲೀಸ್ ಠಾಣೆಯ ವ್ಯಾಪ್ತಿಯ ಕೆಬ್ಬೆಪಾಳ್ಯ ಗ್ರಾಮದಲ್ಲಿ ದಿನಾಂಕ:02/11/2023 ರಂದು ಸಂಜೆ 4–15 ಗಂಟೆ ಸಮಯದಲ್ಲಿ ಪಿರ್ಯಾದಿ ಭಾಗ್ಯಲಕ್ಷ್ಮೀ ಕೊಂ ರಾಮಯ್ಯ 22 ವರ್ಷ, ವಿದ್ಯಾರ್ಥಿ ಇವರು ಚಿಕ್ಕನಾಯಕನಹಳ್ಳಿಯಿಂದ ಕಾಲೇಜನ್ನು ಮುಗಿಸಿಕೊಂಡು ವಾಪಸ್ ಮನೆಗೆ ಬರುವಾಗ ಮಾರ್ಗಮದ್ಯ ಬಾಣಸಂದ್ರದಿಂದ ಯಾರೋ ಇಬ್ಬರೂ ಅಪರಿಚಿತರು ಪಿರ್ಯಾದಿಯನ್ನು ಮನೆವರೆಗೂ ಹಿಂಬಾಲಿಸಿಕೊಂಡು ಬಂದು ಯಾವುದೋ ವಿಳಾಸ ಕೇಳುವ ನೇಪದಲ್ಲಿ ಪಿರ್ಯಾದಿಯನ್ನು ಮಾತನಾಡಿಸಿ ಪಿರ್ಯಾದಿಯನ್ನು ಕೆಟ್ಟ ದೃಷ್ಠಿಯಲ್ಲಿ ನೋಡಿ, ಲೈಂಗಿಕ ಕಿರುಕುಳ ನೀಡಿದರು, ಪಿರ್ಯಾದಿಯು ತನ್ನ ಫೋನ್‌ನಿಂದ ಅವರ ಅಕ್ಕನಿಗೆ ಕರೆ ಮಾಡಲು ಹೋದಾಗ ಇಬ್ಬರೂ ಸೇರಿ ಪಿರ್ಯಾದಿಯನ್ನು ಹೆದರಿಸಿ ಅವರ ಮೋಬೈಲನ್ನು ಕಿತ್ತುಕೊಂಡು ಹೋಗಿರುತ್ತಾರೆ ಈ ಸಂಬಂಧವಾಗಿ ನೀಡಿದ ದೂರಿನ ಮೇರೆಗೆ ದಂಡಿನಶಿವರ ಪೊಲೀಸ್ ಠಾಣೆಯಲ್ಲಿ ಮೊ.ನಂ:81/2023 ಕಲಂ:384, 354 ರೆ/ವಿ 34 ಐ.ಪಿ.ಸಿ ಪ್ರಕರಣ ದಾಖಲಾಗಿರುತ್ತೆ.

ಈ ಪ್ರಕರಣವನ್ನು ಕುಣಿಗಲ್ ಉಪವಿಭಾಗ ಪೊಲೀಸ್ ಉಪಾಧೀಕ್ಷಕರಾದ ಲಕ್ಷ್ಮೀಕಾಂತ್ ರವರ ನೇತೃತ್ವದಲ್ಲಿ ತುರುವೇಕೆರೆ ವೃತ್ತದ ಸಿ.ಪಿ.ಐ ಲೋಹಿತ್.ಬಿ.ಎನ್ ರವರ ಕ್ರೈಂ ತಂಡವನ್ನು ರಚಿಸಲಾಗಿರುತ್ತೆ. ಆರೋಪಿಗಳ ಪತ್ತೆ ಬಗ್ಗೆ ವಿಶೇಷ ಕಾರ್ಯಚರಣೆಯ ಕೈಗೊಂಡು ಪ್ರಕರಣದಲ್ಲಿ ದಿನಾಂಕ:23/12/2023 ರಂದು ಲೈಂಗಿಕ ಕೀರುಕುಳ ನೀಡಿ ಹೆದರಿಸಿ ಮೊಬೈಲ್ ಕಿತ್ತುಕೊಂಡು ಹೋಗಿದ್ದ ಆರೋಪಿಗಳಾದ 1) ಫಾರೀಕ್ ಪಾಷ ಬಿನ್ ಜಾಫರ್ ಸಾಬ್, 30 ವರ್ಷ, ಕೂಲಿ ಕೆಲಸ, ಚಿಕ್ಕನಾಯಕನಹಳ್ಳಿ ನಗರ 2) ಮೊಹಮದ್ ಸಾಹಿಲ್ ಬಿನ್ ಮೊಹಮದ್ ರಫೀಕ್, 20 ವರ್ಷ, ಕೂಲಿ ಕೆಲಸ, ಜೋಗಿಹಳ್ಳಿ, ಚಿಕ್ಕನಾಯಕನಹಳ್ಳಿ ನಗರ ರವರುಗಳಿಂದ 01 ಮೊಬೈಲ್ ಅನ್ನು ವಶಪಡಿಸಿಕೊಂಡಿರುತ್ತೆ.

ಸದರಿ ಪ್ರಕರಣದ ಆರೋಪಿಯನ್ನು ಪತ್ತೆ ಮಾಡುವಲ್ಲಿ ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಅಶೋಕ್.ಕೆ.ವಿ, ಐ.ಪಿ.ಎಸ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರುಗಳಾದ ವಿ.ಮರಿಯಪ್ಪ ಮತ್ತು ಎನ್.ಹೆಚ್.ರಾಮಚಂದ್ರಪ್ಪ ರವರುಗಳ ಮಾರ್ಗದರ್ಶನದಲ್ಲಿ, ಕುಣಿಗಲ್ ಉಪವಿಭಾಗ ಪೊಲೀಸ್ ಉಪಾಧೀಕ್ಷಕರಾದ ಲಕ್ಷ್ಮೀಕಾಂತ್ ರವರ ನೇತೃತ್ವದಲ್ಲಿ ತುರುವೇಕೆರೆ ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ಆದ ಲೋಹಿತ್.ಬಿ.ಎನ್, ದಂಡಿನಶಿವರ ಠಾಣಾ ಪಿ.ಎಸ್.ಐ ರವರುಗಳಾದ ರಾಮಚಂದ್ರಯ್ಯ.ಹೆಚ್, ಚಿತ್ತರಂಜನ್, ಎ.ಎಸ್.ಐ ಗಂಗಣ್ಣ ಮತ್ತು ಸಿಬ್ಬಂದಿಗಳಾದ ಮಂಜುನಾಥ, ಗುರುಮೂರ್ತಿ, ನಿಹಾಲ್, ಪ್ರವೀಣ್‌ಕುಮಾರ, ಲಕ್ಷ್ಮಪ್ಪ ಮತ್ತು ವೃತ್ತ ಕಛೇರಿ ಸಿಬ್ಬಂದಿಗಳು ಆರೋಪಿ ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದು ತನಿಖಾ ತಂಡವನ್ನು ಮಾನ್ಯ ಪೊಲೀಸ್ ಅಧೀಕ್ಷಕರು ರವರು ಶ್ಲಾಘಿಸಿರುತ್ತಾರೆ.

**ಜಿಲ್ಲಾ ಪೊಲೀಸ್ ಕಛೇರಿ**
**ತುಮಕೂರು.**

<u>**ಪತ್ರಿಕಾ ಪ್ರಕಟಣೆ**</u>

<u>**ದಿನಾಂಕ:೧೯/೧೨/೨೦೨೩**</u>

**ದಿನಾಂಕ:೨೧/೦೯/೨೦೨೩ ರಂದು ಪಿರ್ಯಾದುದಾರರಾದ ಶ್ರೀ ಹೆಚ್.ಬಿ.ಕುಮಾರ ಬಿನ್ ಲೇ॥ ಭೀಮಯ್ಯ, ೩೯ ವರ್ಷ, ಹಿಂಡಸ್ಕೆರೆ ಗ್ರಾಮ, ಸಿ.ಎಸ್ ಪುರ ಹೋಬಳಿ, ಗುಬ್ಬಿ ತಾಲ್ಲೂಕು ರವರು ತನ್ನ ಬೈಕ್ ಅನ್ನು ಕೆರೆಯ ಏರಿ ಮೇಲೆ ರಸ್ತೆಯಲ್ಲಿ ನಿಲ್ಲಿಸಿ ಹೂವು ಕೀಳಲು ಶಿವಗಂಗೆ ರಸ್ತೆಯಲ್ಲಿ ಬರುವ ದೇವರ ಅಮಾನಿಕೆರೆಯಲ್ಲಿ ತಾವರೆ ಹೂವು ಕೀಳಲು ಹೋಗಿದ್ದು, ನಂತರ ಬಂದು ನೋಡಲಾಗಿ ದ್ವಿಚಕ್ರ ವಾಹನವು ಕಳುವಾಗಿರುತ್ತೆ. ಈ ಬಗ್ಗೆ ನೀಡಿದ ದೂರಿನ ಮೇರೆಗೆ ಹೆಬ್ಬೂರು ಪೋಲೀಸ್ ಠಾಣೆ ಮೊ.ಸಂ.**208/2023 **ಕಲಂ:**379 **ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ.**

ಈ ಪ್ರಕರಣದ **ಆರೋಪಿಯ ಪತ್ತೆ ಬಗ್ಗೆ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವಿಶೇಷ ತಂಡವನ್ನು ರಚಿಸಿದ್ದು, ಈ ಪ್ರಕರಣದ ಆರೋಪಿಯಾದ ಇರ್ಫಾನ್ ಅಲಿಯಾಸ್ ಫಾಕ್ಸ್ ಬಿನ್ ಅಕ್ರಂ.ಕೆ,** 21 **ವರ್ಷ, ಮುಸ್ಲಿಂ ವೃತ್ತಿ–ವೆಲ್ಡಿಂಗ್ ಕೆಲಸ ವಾಸ–ಗಣೇಶ ದೇವಸ್ಥಾನದ ಹಿಂಭಾಗ, ರಾಜೀವ್ ಗಾಂಧಿ ನಗರ, ತುಮಕೂರು ನಗರ ಈತನನ್ನು ದಸ್ತಗಿರಿ ಮಾಡಿ, ಈತನಿಂದ** 1) ಹೊಂಡಾ ಡಿಯೋ–06 ದ್ವಿಚಕ್ರ ವಾಹನಗಳು 2) ಹೊಂಡಾ ಆಕ್ಟಿವಾ–03 ದ್ವಿಚಕ್ರ ವಾಹನಗಳು 3) ಸ್ಲೆಂಡರ್ ಪ್ಲಸ್–01 ದ್ವಿಚಕ್ರ ವಾಹನ 4) ಪ್ಯಾಶನ್ ಪ್ರೋ–01 ದ್ವಿಚಕ್ರ ವಾಹನ 5) ಡಿಸ್ಕವರ್–01 ದ್ವಿಚಕ್ರ ವಾಹನ ಸೇರಿ ಒಟ್ಟು ಸುಮಾರು 14 ಲಕ್ಷ ಮೌಲ್ಯದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿರುತ್ತೆ.

**ತುಮಕೂರು ಜಿಲ್ಲಾ ಪೋಲೀಸ್ ಅಧೀಕ್ಷಕರಾದ ಅಶೋಕ್.ಕೆ.ವಿ,** ಐ.ಪಿ.ಸಿ ಮತ್ತು ವಿ.ಮರಿಯಪ್ಪ, **ಮಾನ್ಯ ಹೆಚ್ಚುವರಿ ಪೋಲೀಸ್ ಅಧೀಕ್ಷಕರು** ಇವರ ಮಾರ್ಗದರ್ಶನದಲ್ಲಿ ವಿಶೇಷ ತಂಡದ ಅಧಿಕಾರಿಗಳಾದ **ಚಂದ್ರಶೇಖರ್, ಪೋಲೀಸ್ ಉಪಾಧೀಕ್ಷಕರು, ತುಮಕೂರು ನಗರ ಉಪವಿಭಾಗ ರವರ ನೇತೃತ್ವದ ಕ್ಯಾತ್ಸಂದ್ರ ವೃತ್ತ ನಿರೀಕ್ಷಕರಾದ ರಾಮಪ್ರಸಾದ್, ಹೆಬ್ಬೂರು ಪೋಲೀಸ್ ಠಾಣೆ ಆರಕ್ಷಕ ಉಪನಿರೀಕ್ಷಕರು ಬೈರೇಗೌಡ ಹಾಗೂ ಅವರ ಸಿಬ್ಬಂದಿಗಳಾದ ಸಿದ್ದರಾಜು, ನಂದೀಶ್, ಕುಮಾರಯ್ಯ,** ರಮೇಶ್, ಹನುಮರಂಗ, ದೇವರಾಜು, ಅರುಣಕುಮಾರ, ಕಿರಣಕುಮಾರ, **ಬಸವರಾಜು, ಹೇಮಂತ್ ಕುಮಾರ್ ಹಾಗೂ ಉಮಲು ರಾಠೋಡ ರವರುಗಳನ್ನು ಜಿಲ್ಲಾ ಪೋಲೀಸ್ ಅಧೀಕ್ಷಕರು ಶ್ಲಾಘಿಸಿರುತ್ತಾರೆ.**

ಪೊಲೀಸ್ ಅಧೀಕ್ಷಕರು,
ತುಮಕೂರು ಜಿಲ್ಲೆ.

ದಿನಾಂಕ:–14–12–2023

## ಪತ್ರಿಕಾ ಪ್ರಕಟಣೆ

### ಹುಡುಗಿ ಹಾಗೆ ನಟಿಸಿ ಹಣ ದೋಚಿದ್ದ ಸೈಬರ್ ವಂಚಕನ ಬಂಧನ.

ತುಮಕೂರು ಜಿಲ್ಲೆ, ಶಿರಾ ನಗರದ ವಿದ್ಯಾನಗರ ವಾಸಿಯಾದ ಶಾಂತಕುಮಾರ್ ರವರ ಮಗನಾದ ಭರತ್ ಕುಮಾರ್ ರವರಿಗೆ ಈಚಿಟಿಜ ಛಿಚಿಣ ಅಪರಿಚಿತ ವ್ಯಕ್ತಿಗಳು ಶರ್ಮಿಳ ಹಾಗೂ ದಿವ್ಯ ಎಂದು ಪರಿಚಯಿಸಿಕೊಂಡು ಅವರಿಗೆ ಒಜಿಚಿಟಿಜಿ, ಷಿಚಿಣ೦ರಿರಿ ಮೂಲಕ ಚಾಟ್ ಮಾಡಿಕೊಂಡು ಕಷ್ಟ ಇದೆ ಎಂದು ನಂಬಿಸಿ ದಿನಾಂಕ : 09–07–2023 ರಿಂದ ದಿನಾಂಕ : 23–07–2023ರ ವರೆಗೆ 7,25,000/–ರೂಗಳನ್ನು ಕಿಡಿಟಿಜಿಜ ಚಿಥಿ ಣಟ ಉಜಿಜ ರಿಚಿಥಿ ಹಾಗೂ ಉಳಿತಾಯ ಖಾತೆಗಳಿಗೆ ಹಾಕಿಸಿಕೊಂಡು ವಂಚಿಸಿದ್ದು, ಈ ಬಗ್ಗೆ ಸಿ.ಇ.ಎನ್ ಠಾಣೆಯಲ್ಲಿ ದಿ: 15–08–2023 ರಂದು ಮೊ.ನಂ 115/2023 ಕಲಂ 66 (ಸಿ) & (ಡಿ) ಐಟಿ ಆಕ್ಟ್ ಹಾಗೂ ಕಲಂ 419, 420 ಐಪಿಸಿ ರೀತ್ಯಾ ಕೇಸು ದಾಖಲಾಗಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಪೊಲೀಸ್ ಅಧೀಕ್ಷಕರಾದ ಅಶೋಕ್.ಕೆ.ವಿ. ಐ.ಪಿ.ಎಸ್ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿ. ಮರಿಯಪ್ಪ, ಕೆ.ಎಸ್.ಪಿ.ಎಸ್, ತುಮಕೂರು ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಕೆ.ಆರ್. ಚಂದ್ರಶೇಖರ್. ಕೆ.ಎಸ್.ಪಿ.ಎಸ್ ರವರುಗಳ ಮಾರ್ಗದರ್ಶನದಲ್ಲಿ ಸಿ.ಇ.ಎನ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್ ರವರಾದ ರಾಮಕೃಷ್ಣಯ್ಯ. ಸಿ.ಹೆಚ್ ರವರು ತನಿಖೆ ಕೈಗೊಂಡು ದಿನಾಂಕ : 12–12–2023 ರಂದು ಪ್ರಕರಣದಲ್ಲಿನ ಆರೋಪಿಯಾದ ಸುಜೇಂದ್ರ ಬಿನ್ ಕೃಷ್ಣ ಎಂ.ಬಿ. 21 ವರ್ಷ, ತೀರ್ಥಹಳ್ಳಿ ರಸ್ತೆ, ಶಿವಮೊಗ್ಗ ಟೌನ್ ಈತನನ್ನು ದಸ್ತಗಿರಿ ಮಾಡಿ ಆರೋಪಿಯಿಂದ ಕೃತ್ಯಕ್ಕೆ ಬಳಸುತ್ತಿದ್ದ ಮೊಬೈಲ್ ಫೋನ್ ಅಮಾನತ್ತು ಪಡಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತದೆ. ತನಿಖಾ ಕಾಲದಲ್ಲಿ ಆರೋಪಿಯು ಭರತ್ ಕುಮಾರ್ ರವರಿಗೆ ತಾನು ಹುಡುಗಿಯೆಂದು ನಟಿಸಿ ಚಾಟ್ ಮಾಡಿ ಅವರಿಂದ ೬,೮೭,೩೪೭/– ರೂಗಳನ್ನು ಪಡೆದುಕೊಂಡಿರುವುದು ಧೃಢಪಟ್ಟಿರುತ್ತದೆ. ಪ್ರಕರಣದ ತನಿಖೆ ಮುಂದುವರೆದಿದ್ದು ಕೃತ್ಯದಲ್ಲಿ ಭಾಗಿಯಾಗಿರುವ ಇತರೆ ಆರೋಪಿಗಳ ಪತ್ತೆ ಕಾರ್ಯ ಮುಂದುವರೆದಿರುತ್ತದೆ.

ಆರೋಪಿಗಳ ಬಂಧನಕ್ಕೆ ಶ್ರಮಿಸಿದ ಸಿ.ಇ.ಎನ್ ಪೊಲೀಸ್ ಠಾಣೆಯ ಇನ್ಸ್ ಪೆಕ್ಟರ್ ರಾಮಕೃಷ್ಣಯ್ಯ. ಸಿ.ಹೆಚ್, ಪಿ.ಎಸ್.ಐ ಪ್ರಸನ್ನ ಕುಮಾರ್, ಸಿಬ್ಬಂದಿಗಳಾದ ಮಾರುತೀಶ್, ಹರೀಶ್, ಅನಿಲ್ ಕುಮಾರ್, ಶಿವಕುಮಾರ್ ಲಮಾಣಿ, ಚಾಲಕರಾದ ಗಿರೀಶ್ ರವರುಗಳ ಕಾರ್ಯವನ್ನು ಮಾನ್ಯ ಪೊಲೀಸ್ ಅಧೀಕ್ಷಕರು ಶ್ಲಾಘಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಕಚೇರಿ
ತುಮಕೂರು.

## ಪತ್ರಿಕಾ ಪ್ರಕಟಣೆ

ದಿನಾಂಕ: 05.12.2023

ದಿನಾಂಕ:07/12/2023 ರಿಂದ ಪೊಲೀಸ್ ಅಧೀಕ್ಷಕರಾದ ಶ್ರೀ ಅಶೋಕೆ.ಕೆ.ವಿ, ಐ.ಪಿ.ಎಸ್ ರವರು ಖುದ್ದು ಈ ಕೆಳಕಂಡ ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿ ಪೊಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಿದ್ದು, ಈ ಸಮಯದಲ್ಲಿ ಸಂಬಂಧಪಟ್ಟ ವೃತ್ತ ನಿರೀಕ್ಷಕರುಗಳು ಹಾಗೂ ಡಿವೈ.ಎಸ್.ಪಿ ರವರುಗಳು ಸಭೆಯಲ್ಲಿ ಹಾಜರಿರುತ್ತಾರೆ. ಆದ್ದರಿಂದ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ದೂರುಗಳನ್ನು ಖುದ್ದಾಗಿ ಪೊಲೀಸ್ ಅಧೀಕ್ಷಕರಿಗೆ ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿರುತ್ತೆ.

- ದಿನಾಂಕ:07/12/2023 ರಂದು ತಿರುಮಣಿ, ವೈ.ಎನ್ ಹೊಸಕೋಟೆ, ಅರಸೀಕೆರೆ ಪೊಲೀಸ್ ಠಾಣೆಗಳು
- ದಿನಾಂಕ:08/12/2023 ರಂದು ಪಟ್ಟನಾಯಕನಹಳ್ಳಿ, ತಾವರೆಕೆರೆ, ಕಳ್ಳಂಬೆಳ್ಳ, ಕೋರಾ ಪೊಲೀಸ್ ಠಾಣೆಗಳು
- ದಿನಾಂಕ:12/12/2023 ರಂದು ಕೊಡಿಗೇನಹಳ್ಳಿ, ಮಿಡಿಗೇಶಿ, ಕೋಳಾಲ ಪೊಲೀಸ್ ಠಾಣೆಗಳು
- ದಿನಾಂಕ:13/12/2023 ರಂದು ಬೆಳ್ಳಾವಿ, ಚೇಳೂರು, ಸಿ.ಎಸ್ ಪುರ ಪೊಲೀಸ್ ಠಾಣೆಗಳು
- ದಿನಾಂಕ:14/12/2023 ರಂದು ಹೊನ್ನವಳ್ಳಿ, ಹಂದನಕೆರೆ, ಹುಳಿಯಾರು ಪೊಲೀಸ್ ಠಾಣೆಗಳು
- ದಿನಾಂಕ:15/12/2023 ರಂದು ನೊಣವಿನಕೆರೆ, ದಂಡಿನಶಿವರ, ತುರುವೇಕೆರೆ ಪೊಲೀಸ್ ಠಾಣೆಗಳು
- ದಿನಾಂಕ:15/12/2023 ರಂದು ಹೆಬ್ಬೂರು, ಹುಲಿಯೂರುದುರ್ಗ, ಅಮೃತೂರು ಪೊಲೀಸ್ ಠಾಣೆಗಳು

–: ತುಮಕೂರು ಜಿಲ್ಲಾ ಪೊಲೀಸ್ :–

ಪತ್ರಿಕಾ ಪ್ರಕಟಣೆ

ದಿನಾಂಕ:–27/11/2023

## ತುಮಕೂರು ನಗರದಲ್ಲಿ ವಾಹನ ಕಳವು ಮತ್ತು ದೇವಸ್ಥಾನದ ಹುಂಡಿಗಳನ್ನು ಹೊಡೆದು ಕಳ್ಳತನ ಮಾಡಿದ್ದ ಕಳ್ಳನ ಬಂಧನ

ದಿನಾಂಕ 19–10–2023 ರಂದು ಸಂಜೆ 06–30ಗಂಟೆ ಸಮಯದಲ್ಲಿ ಶ್ರೀ ವೆಂಕಟೇಶ್ ತುಮಕೂರು ಅಮಾನಿಕೆರೆಯಲ್ಲಿ ಇರುವ ಗ್ಲಾಸ್ ಹೌಸ್ ನಲ್ಲಿ ಎಕ್ಸಿಬಿಷನ್ ನೋಡಲು ಹೋದಾಗ ದ್ವಿ ಚಕ್ರ ವಾಹನ ಸಂಖ್ಯೆ ಕೆಎ06 ಇಯು 7330 ಯನ್ನು ಗ್ಲಾಸ್ ಹೌಸ್ ಮುಂಬಾಗದ ಪಾರ್ಕಿಂಗ್ ನಲ್ಲಿ ನಿಲ್ಲಿಸಿದ್ದನ್ನು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದು, ಠಾಣಾ ಮೊ.ನಂ. 453/2023 ಕಲಂ–379 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ. ಆರೋಪಿಗಳ ಹಾಗೂ ಮಾಲಿನ ಪತ್ತೆಗಾಗಿ ಪತ್ತೆ ತಂಡವನ್ನು ರಚಿಸಿದ್ದು, ಸದರಿ ಪತ್ತೆ ತಂಡವು ಆರೋಪಿಯಾದ ತಿಪ್ಪೇಶ್ ಬಿನ್ ಹನುಮಂತಪ್ಪ, 33 ವರ್ಷ, ಗಾರೆ ಕೆಲಸ, ಬೂತಪ್ಪನ ದೇವಸ್ಥಾನ ಬುವನಹಳ್ಳಿ, ಕಸಬಾ(ಹೊ), ಶಿರಾ(ತಾ) ತುಮಕೂರು ಜಿಲ್ಲೆ ರವರನ್ನು ಪತ್ತೆ ಮಾಡಿ, ಆರೋಪಿಯ ಕಡೆಯಿಂದ ಕಳವಾಗಿದ್ದ ಕೆಎ.06.ಇಯು.7330 ನೇ ಹೊಂಡಾ ಕಂಪನಿಯ ಡ್ರೀಮ್ ಯುಗಾ ದ್ವಿ ಚಕ್ರ ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತದೆ.

ನಂತರ ವಿಚಾರಣೆ ಕಾಲದಲ್ಲಿ ಸದರಿ ಆರೋಪಿಯು ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆ ಸರಹದ್ದು, ಹೆಗ್ಗೆರೆ ಗ್ರಾಮದಲ್ಲಿ ಕಳ್ಳತನ ಮಾಡಿದ್ದ ಕೆಎ–06–ಇಪಿ–6846 ದ್ವಿ ಚಕ್ರ ವಾಹನ, ತಿಲಕ್ ಪಾರ್ಕ್ ಪೊಲೀಸ್ ಠಾಣೆಯ ಸರಹದ್ದು, ಶ್ರೀ ಶನಿಮಹಾತ್ಮ ದೇವಸ್ಥಾನದ ಬಾಗಿಲನ್ನು ಹೊಡೆದು ಕಳ್ಳತನ ಮಾಡಲು ಪ್ರಯತ್ನಿಸಿದ್ದರಿಂದ ಠಾಣಾ ಮೊ ನಂ: 137/2023 ಕಲಂ 457, 380, 511 ಐಪಿಸಿ ಹಾಗೂ ಜಯನಗರ ಪೊಲೀಸ್ ಠಾಣೆ ಸರಹದ್ದಿನಲ್ಲಿ ಅಂಜನೇಯ ಸ್ವಾಮಿ ದೇವಸ್ಥಾನದ ಹುಂಡಿಯನ್ನು ಹೊಡೆದು ಕಳ್ಳತನ ಮಾಡಿಕೊಂಡು ಹೋಗಿದ್ದರ ಮೇರೆಗೆ ಮೊ ನಂ: 170/2023 ಕಲಂ:457,380 ಐಪಿಸಿ ಪ್ರಕರಣಗಳನ್ನು ಪತ್ತೆ ಮಾಡಿ ಅಂದಾಜು ಬೆಲೆ ಒಟ್ಟು 1,20,000/– ರೂ.ಗಳ ಮಾಲನ್ನು ಪತ್ತೆ ಮಾಡಿರುತ್ತೆ. ಆರೋಪಿಯು ಹಾಲಿ ನ್ಯಾಯಾಂಗ ಬಂಧನದಲ್ಲಿರುತ್ತಾನೆ.

ಮರಿಯಪ್ಪ, ಕೆ.ಎಸ್.ಪಿ.ಎಸ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರುರವರ ಮಾರ್ಗದರ್ಶನದಲ್ಲಿ, ಚಂದ್ರಶೇಖರ್ ಕೆ.ಆರ್, ಪೊಲೀಸ್ ಉಪಾಧೀಕ್ಷಕರು, ತುಮಕೂರು ಉಪವಿಭಾಗ ರವರ ನೇತೃತ್ವದಲ್ಲಿ ದಿನೇಶ್ ಕುಮಾರ್ ಬಿ.ಎಸ್, ಪೊಲೀಸ್ ನಿರೀಕ್ಷಕರು, ತುಮಕೂರು ನಗರ ಠಾಣೆ ರವರು ಭಾರತಿ ಎಸ್.ಸಿ, ಪಿ.ಎಸ್.ಐ ಹಾಗೂ ತುಮಕೂರು ನಗರ ಪೊಲೀಸ್ ಠಾಣೆಯ ಸಿಬ್ಬಂದಿಗಳಾದ ದಿನೇಶ್, ಮತ್ತು ಚಂದನ್ ಬಿ ಹಾಗೂ ರವಿಚಂದ್ರ ರವರುಗಳು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ಪತ್ತೆ ತಂಡವನ್ನು ಅಶೋಕ್ ಕೆ.ವಿ, ಐಪಿಎಸ್, ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ ರವರು ಅಭಿನಂದಿಸಿದ್ದಾರೆ.

ಜಿಲ್ಲಾ ಪೊಲೀಸ್ ಕಛೇರಿ,

ತುಮಕೂರು.

:-: ಪತ್ರಿಕಾ ಪ್ರಕಟಣೆ :-:

ದಿನಾಂಕ : 25-11-2023

**ಸುಲಿಗೆ ಮಾಡಿದ್ದ ಆರೋಪಿಗಳ ಬಂಧನ**

ದಿನಾಂಕ : 20-11-2023 ರಂದು ರಾತ್ರಿ 8.00 ಗಂಟೆಯಲ್ಲಿ ಬಡವನಹಳ್ಳಿ ಠಾಣಾ ವ್ಯಾಪ್ತಿಯ ತೋವಿನಕೆರೆ-ಕೈಮರ ರಸ್ತೆ ಹನುಮನಹಳ್ಳಿ ಸಮೀಪ ಕಾವಣದಾಲ ಗ್ರಾಮದ ವಾಸಿ ರೇಣುಕಾರಾಧ್ಯ ರವರು ತನ್ನ ಹೆಂಡತಿ ಶಕುಂತಲ ರವರನ್ನು ಬೈಕಿನಲ್ಲಿ ಕೂರಿಸಿಕೊಂಡು ಹೋಗುವಾಗ ಕೆ.ಎ-53 ಡಿ-6752 ನೇ ಮಾರುತಿ ಶಿಫ್ಟ್ ಡಿಜೈರ್ ಕಾರಿನಲ್ಲಿ ಕೆಲವು ಆಸಾಮಿಗಳು ಬಂದು ಕಾರನ್ನು ಬೈಕಿಗೆ ಅಡ್ಡ ನಿಲ್ಲಿಸಿ ಮಚ್ಚು ಮತ್ತು ಡ್ರ್ಯಾಗರ್ ತೋರಿಸಿ ಹೆದರಿಸಿ ರೇಣುಕಾರಾಧ್ಯ ರವರಿಗೆ ಮಚ್ಚಿನಿಂದ ಹೊಡೆದು ಹಲ್ಲೆ ಮಾಡಿ ಅವರ ಬಳಿ ಇದ್ದ 400 ರೂ ನಗದು ಹಣ ಒಂದು ವಿವೋ ಮೊಬೈಲ್ ಮತ್ತು ಶಕುಂತಲ ರವರ ಕೊರಳಲಿದ್ದ ಬಂಗಾರದ ಗುಂಡು ಮತ್ತು ತಾಳಿಯಿದ್ದ ಕರಿಮಣಿ ಸರವನ್ನು ಕಿತ್ತುಕೊಂಡು ಹೋಗುವಾಗ ಸಾರ್ವಜನಿಕರು ಸದರಿ ಕಾರನ್ನು ಹಿಂಬಾಲಿಸಿದಾಗ ಕಾರನ್ನು ಸದರಿ ಆಸಾಮಿಗಳು ತಿಮ್ಮಲಾಪುರ ಅಭಯಾರಣ್ಯ ಪ್ರದೇಶದ ಒಳಗಡೆ ಬಿಟ್ಟು ಪರಾರಿಯಾಗಿದ್ದು, ಈ ಸಂಬಂಧ ಬಡವನಹಳ್ಳಿ ಪೊಲೀಸ್ ಠಾಣಾ ಮೊ.ನಂ:110/2023 ಕಲಂ 394 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ.

ಸದರಿ ಪ್ರಕರಣವನ್ನು ಪತ್ತೆ ಹಚ್ಚಲು ಕಾಂತರೆಡ್ಡಿ. ಎಸ್.ಆರ್ ಪೊಲೀಸ್ ಇನ್ಸ್‌ಪೆಕ್ಟರ್ ಬಡವನಹಳ್ಳಿ ಪೊಲೀಸ್ ಠಾಣೆ ರವರ ನೇತೃತ್ವದಲ್ಲಿ ತಂಡವನ್ನು ರಚಿಸಿದ್ದು, ಸದರಿ ತಂಡವು ಕೆಳಕಂಡ ಆರೋಪಿಗಳನ್ನು ಪತ್ತೆ ಮಾಡಿ, ಆರೋಪಿತರಿಂದ ಬಡವನಹಳ್ಳಿ ಪೊಲೀಸ್ ಠಾಣೆಯ 02 ಸುಲಿಗೆ ಪ್ರಕರಣಗಳು, ಹುಳಿಯಾರು ಪೊಲೀಸ್ ಠಾಣೆಯ 01 ಸುಲಿಗೆ ಪ್ರಕರಣ, ಕೋರ ಪೊಲೀಸ್ ಠಾಣೆಯ 01 ಸುಲಿಗೆ ಪ್ರಕರಣದಲ್ಲಿ ಒಟ್ಟು ಸುಮಾರು 5 ಲಕ್ಷ ರೂ ಬೆಲೆ ಬಾಳುವ ಬಂಗಾರದ ವಡವೆಗಳು ಮತ್ತು 75 ಸಾವಿರ ಬಲೆ ಬಾಳುವ 05 ಮೊಬೈಲ್ ಫೋನ್ ಗಳು ಹಾಗೂ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಕೆ.ಎ-53 ಡಿ-6752ನೇ ಕಾರು ಮತ್ತು ಕೆ.ಎ-02 ಹೆಚ್.ಯು-8353 ನೇ ಆಕ್ಸೀಸ್ ಬೈಕನ್ನು ವಶಪಡಿಸಿಕೊಂಡು ಕಾನೂನು ರೀತ್ಯಾ ಕ್ರಮ ಕೈಗೊಂಡಿರುತ್ತಾರೆ.

ಆರೋಪಿಗಳ ವಿವರ

1) ಪಿ ರಾಕೇಶ ಬಿನ್ ಪುಟ್ಟರಂಗಯ್ಯ, 50 ವರ್ಷ, ಮ್ಯಾಕಾನಿಕ್ ಕಲಸ, ಮರಬಹಳ್ಳಿ ಕಸಬಾ ಹೋಬಳಿ, ಮಧುಗಿರಿ ತಾಲ್ಲೂಕ್ ತುಮಕೂರು ಜಿಲ್ಲೆ, ಹಾಲಿ ವಾಸ, ಶನಿಮಹಾತ್ಮ ದೇವಸ್ಥಾನದ ಬಳಿ ರಾಜಗೋಪಾಲನಗರ ಬೆಂಗಳೂರು
2) ಮಂಜುನಾಥ. ಬಿ.ಕೆ ಬಿನ್ ಕಾಂತರಾಜು, 30 ವರ್ಷ, ಡ್ರೈವರ್ , ಬ್ಯಾಟಗಾನಹಟ್ಟಿ, ಕಳ್ಳಂಬೆಳ್ಳ ಹೋಬಳಿ, ಶಿರಾ ತಾಲ್ಲೂಕ್, ತುಮಕೂರು ಜಿಲ್ಲೆ.
3) ಶಿವಕುಮಾರ ಬಿನ್ ಕಲ್ಯಾಣ್ ರಾವ್, 31 ವರ್ಷ, ಟೈಲರ್, ಮರಗುತ್ತಿ ಗ್ರಾಮ ಕಮಲಾಪುರ ಹೋಬಳಿ & ತಾಲ್ಲೂಕ್, ಗುಲ್ಬರ್ಗಾ ಜಿಲ್ಲೆ,
4) ಚಂದನ್ ಬಿ.ಎಸ್ ಬಿನ್ ಶಿವಣ್ಣ 22 ವರ್ಷ, ಬ್ಯಾಟಗಾನಹಟ್ಟಿ, ಕಳ್ಳಂಬೆಳ್ಳ ಹೋಬಳಿ, ಶಿರಾ ತಾಲ್ಲೂಕ್, ತುಮಕೂರು ಜಿಲ್ಲೆ.

ಸದರಿ ಪ್ರಕರಣದ ಆರೋಪಿಗಳು ಮತ್ತು ವಂಚಿಸಿದ ಹಣವನ್ನು ಪತ್ತೆ ಹಚ್ಚಲು ಶ್ರಮಿಸಿದ ಶ್ರೀ.ವಿ.ಮರಿಯಪ್ಪ. ಕೆ.ಎಸ್.ಪಿ.ಎಸ್. ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಹಾಗೂ ಶ್ರೀ ರಾಮಚಂದ್ರಪ್ಪ ಕೆ.ಎಸ್.ಪಿ.ಎಸ್ ಡಿ.ಎಸ್.ಪಿ. ಮಧುಗಿರಿ ಉಪ ವಿಭಾಗ ರವರ ಮಾರ್ಗದರ್ಶನದಲ್ಲಿ ಶ್ರೀ ಕಾಂತರೆಡ್ಡಿ. ಎಸ್.ಆರ್. ಪೊಲೀಸ್ ಇನ್ಸ್‌ಪೆಕ್ಟರ್ ಬಡವನಹಳ್ಳಿ ಪೊಲೀಸ್ ಠಾಣೆ ರವರ ನೇತೃತ್ವದಲ್ಲಿ ಪಿ.ಎಸ್.ಐ. ನಾಗರಾಜು, ಎ.ಎಸ್.ಐ. ನಾಗಭೂಷಣ್, ಸಿಬ್ಬಂದಿಗಳಾದ ಆನಂದ್, ರಂಗನಾಥ್ ಸತೀಶ, ಶ್ರೀನಿವಾಸ, ನಾರಾಯಣಸ್ವಾಮಿ ರವರುಗಳ ತಂಡವನ್ನು ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಅಶೋಕ್ ಕೆ.ವಿ. ಐ.ಪಿ.ಎಸ್. ರವರು ಅಭಿನಂದಿಸಿರುತ್ತಾರೆ.

ದಿನಾಂಕ : 25-11-2023

:-: ಪತ್ರಿಕಾ ಪ್ರಕಟಣೆ :-:

**ಕದ್ದ ಮೊಬೈಲ್‌ನ ಮಾಲೀಕನ ಅಕೌಂಟ್‌ನಿಂದಲೆ, ಹಣ ವರ್ಗಾಯಿಸಿ ವಂಚಿಸುತ್ತಿದ್ದ ಆರೋಪಿಗಳ ಬಂಧನ**

ದಿನಾಂಕ 08.08.2023 ರಂದು ಬೆಳಿಗ್ಗೆ ಹುಳಿಯಾರು ಟೌನ್ ವಾಸಿಯಾದ ಪಿರ್ಯಾದಿ ರಂಗನಾಥ್ ಬಿನ್ ತಿಮ್ಮಯ್ಯ 26 ವರ್ಷ, ಖಾಸಗಿ ಕೆಲಸ, ವಿಜಯನಗರ ಬಡಾವಣೆರವರು ಹುಳಿಯಾರಿನಿಂದ ಬೆಂಗಳೂರಿಗೆ ಹೋಗಿ ಬೆಂಗಳೂರಿನಲ್ಲಿ ಪಿರ್ಯಾದಿ ಬಾಬ್ತು ರಿಯಲ್ ಮಿ 10 ಪ್ರೋ 5 ಜಿ ಮೊಬೈಲ್ ಮೊಬೈಲ್ ನೋಡಿಕೊಂಡಾಗ ತನ್ನ ಬಾಬ್ತು 8123395339, 7204631833, ಜಿಯೋ ನಂಬರ್‌ನ ಸಿಮ್ ಸಹಿತ ಮೊಬೈಲ್ ಕಳೆದು ಹೋಗಿದ್ದು ಈ ಹಿನ್ನಲೆಯಲ್ಲಿ ಮೊಬೈಲ್ ನಂಬರ್ ಲಾಕ್ ಮಾಡಿಸಿ ಹೊಸ ಸಿಮ್ ಹಾಗೂ ಮೊಬೈಲ್ ತೆಗೆದುಕೊಂಡು ನೋಡಲಾಗಿ, ಫಿರ್ಯಾದು ಮೊಬೈಲ್ ನಂಬರ್ ಫೋನ್ ಪೇ ಗೆ 8123395339 ಲಿಂಕ್ ಆಗಿದ್ದ ನಂಬರಿನಿಂದ ಒಟ್ಟು 1,38,100 ರೂಗಳ ಹಣವನ್ನು ವಂಚನೆ ಮಾಡಿದ್ದು, ಕಂಡು ಬಂದ ಹಿನ್ನಲೆಯಲ್ಲಿ ತನ್ನ ಬಾಬ್ತು ಮೊಬೈಲ್ ಕದ್ದು, ಫೋನ್ ಪೇ ಮೂಲಕ ಹಣ ವಂಚನೆ ಮಾಡಿರುತ್ತಾರೆ. ಆರೋಪಿತರನ್ನು ಪತ್ತೆ ಮಾಡಿ ಎಂತಾ ನೀಡಿದ ದೂರನ್ನು ಪಡೆದು ಹುಳಿಯಾರು ಠಾಣಾ ಮೊ.ನಂ 150/2023 ಕಲಂ 420 ಐಪಿಸಿ ಮತ್ತು 66(ಸಿ) (ಡಿ) ಐಟಿ ಆಕ್ಟ್ ರೀತ್ಯಾ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣ ಸಂಬಂಧ ಚಿಕ್ಕನಾಯಕನಹಳ್ಳಿ ಸಿ.ಪಿ.ಐ. ಎಫ್.ಕೆ.ನದಾಫ್ ರವರ ನೇತೃತ್ವದಲ್ಲಿ ತಂಡವನ್ನು ರಚಿಸಿದ್ದು ಸದರಿ ತಂಡವು ದಿನಾಂಕ 25.08.2023 ರಂದು ಈ ಕೆಳಕಂಡ ಆರೋಪಿತರನ್ನು ದಸ್ತಗಿರಿ ಮಾಡಿದ್ದು ಸದರಿ ಆರೋಪಿತರಿಂದ ಒಟ್ಟು ಸುಮಾರು 21 ಲಕ್ಷ ರೂ ಮೌಲ್ಯ ಬೆಲೆ ಬಾಳುವ 101 ವಿವಿಧ ಕಂಪನಿಯ ಅಂಡ್ರಾಯ್ಡ್ ಮೊಬೈಲ್ ಫೋನ್ ಗಳು ಹಾಗೂ ಆರೋಪಿತರ ಕಡೆಯಿಂದ 1,18,300/- ರೂ ನಗದು ಹಣವನ್ನು ಮತ್ತು ಕೃತ್ಯಕ್ಕೆ ಬಳಸುತ್ತಿದ್ದ ಒಂದು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡು ಕಾನೂನು ರೀತ್ಯಾ ಕ್ರಮ ಕೈಗೊಂಡಿರುತ್ತೆ.

ಆರೋಪಿಗಳಾದ

1) ಗೋಪಿ ಬಿನ್ ಶ್ರೀನಿವಾಸ್ 24 ವರ್ಷ, ಆಟೋ ಚಾಲಕ ವೃತ್ತಿ 02ನೇ ಬೀದಿ,ನಾಗದೇವತೆ ದೇವಸ್ಥಾನದ ಹತ್ತಿರ, ಕಾಳಕುಂಟ@ ಹರೀಶ್ ರಾವ್ ನಗರ, ಸಿದ್ದಿಪೇಟೆ ಜಿಲ್ಲೆ, ತೆಲಂಗಾಣ ರಾಜ್ಯ.

2) ಎಸ್ ಡಿ ಶ್ಯಾಮ್ @ ರವಿ @ ಡಿ ಸ್ಯಾಮ್ಸನ್ ಬಿನ್ ಶಿವ@ ಡೇವಿಡ್ 20 ವರ್ಷ, ಬಟ್ಟೆ ವ್ಯಾಪಾರ ವೃತ್ತಿ ಸ್ವಂತ ಊರು ಬಿಆರ್‌ಪಿ ಪ್ರಾಜೆಕ್ಟ್ ಗ್ಯಾರೇಜ್ ಕ್ಯಾಂಪ್, ಸಿಂಗನ ಮನೆ, 01ನೇ ಮುಖ್ಯ ರಸ್ತೆ, 02ನೇ ಕ್ರಾಸ್ ಭದ್ರಾವತಿ ಟೌನ್, ಶಿವಮೊಗ್ಗ ಜಿಲ್ಲೆ. ಹಾಲಿ ವಾಸ 02ನೇ ಬೀದಿ, ನಾಗದೇವತೆ ದೇವಸ್ಥಾನದ ಹತ್ತಿರ, ಕಾಳಕುಂಟ@ ಹರೀಶ್ ರಾವ್ ನಗರ, ಸಿದ್ದಿಪೇಟೆ ಜಿಲ್ಲೆ, ತೆಲಂಗಾಣ ರಾಜ್ಯ.

ಸದರಿ ಪ್ರಕರಣದ ಆರೋಪಿಗಳು ಮತ್ತು ವಂಚನೆ ಮಾಡಿದ್ದ ನಗದು ಹಣ ಮತ್ತು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲು ಶ್ರಮಿಸಿದ ತುಮಕೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಮರಿಯಪ್ಪ ವಿ ಕೆ.ಎಸ್.ಪಿ.ಎಸ್. ರವರ ಮಾರ್ಗದರ್ಶನದಲ್ಲಿ ತಿಪಟೂರು ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ ವಿನಾಯಕ್.ಎನ್.ಶೆಟಗೇರಿ ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಚಿಕ್ಕನಾಯಕನಹಳ್ಳಿ ವೃತ್ತ ನಿರೀಕ್ಷಕರಾದ ಎಫ್.ಕೆ.ನದಾಫ್. ರವರ ನೇತೃತ್ವದಲ್ಲಿ ಪಿಎಸ್‌ಐ ಧರ್ಮಾಂಜಿ, ಹಾಗೂ ಹುಳಿಯಾರು ಠಾಣೆಯ ಸಿಬ್ಬಂದಿಗಳಾದ ದಕ್ಷಿಣಮೂರ್ತಿ, ಜಯರಾಮು, ಶಿವರಾಜಕುಮಾರ್, ಕೇಶವಮೂರ್ತಿ, ಉಮಾಶಂಕರ್ ಚಾಲಕ ರಂಗಸ್ವಾಮಿ ರವರುಗಳ ತಂಡವನ್ನು ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ರಾಹುಲ್ ಕುಮಾರ್ ಶಹಪೂರ್ ವಾಡ್ ಐ.ಪಿ.ಎಸ್.ರವರು ಅಭಿನಂದಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಕಛೇರಿ
ತುಮಕೂರು ಜಿಲ್ಲೆ.

**ಪತ್ರಿಕಾ ಪ್ರಕಟಣೆ**

ದಿನಾಂಕ. 21-11-2023.

ಮನೆಕಳ್ಳತನ, ಸರಕಳ್ಳತನ, ದ್ವಿಚಕ್ರ ವಾಹನಗಳ ಮಾಡುತ್ತಿದ್ದ ಆಸಾಮಿಗಳ ಬಂಧನ

ಜಯನಗರ ಪೊಲೀಸ್ ಠಾಣಾ ಮೊ.ನಂ. 172/2023 ಕಲಂ 454, 457, 380 ಐ.ಪಿ.ಸಿ.

ದಿನಾಂಕ:-21-10-2023 ರಂದು ಪಿರ್ಯಾದಿ ಉಮಾಶಂಕರ್ ಕೆ.ಎಲ್. ರವರು ತಮ್ಮ ಮನೆಗೆ ಬೀಗ ಹಾಕಿಕೊಂಡು ಪ್ರವಾಸ ಹೋಗಿದ್ದು, ನಂತರ ದಿನಾಂಕ:-24-10-2023 ಬೆಳಿಗ್ಗೆ 7-15 ಗಂಟೆಗೆ ವಾಪಸ್ ಮನೆಗೆ ಬಂದು ನೋಡಲಾಗಿ ಮನೆಯ ಹಿಂಭಾಗದ ಗ್ರಿಲ್ ಡೋರ್ ಅನ್ನು ಯಾರೋ ಕಳ್ಳರು ಯಾವುದೋ ಅಯುಧದಿಂದ ಮೀಟಿ ಮನೆಯೊಳಗೆ ಹೋಗಿ ಮಂಚದ ಕಬೋರ್ಡ್‌ನಲ್ಲಿಟ್ಟಿದ್ದ 7 ಕೆಜಿ ಬೆಳ್ಳಿಯ ಅಭರಣಗಳನ್ನು ಮತ್ತು ಮೇಲ್ಭಾಗದ ರೂಂನ ವಾರ್ಡ್‌ರೋಬ್‌ನಲ್ಲಿಟ್ಟಿದ್ದ 45 ಗ್ರಾಂ ತೂಕದ ಚಿನ್ನದ ಸರವನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು, ಈ ಬಗ್ಗೆ ಜಯನಗರ ಠಾಣೆಯಲ್ಲಿ ಮೊ.ನಂ.172/2023 ಕಲಂ. 454. 457. 380 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿದ್ದು ಈ ಪ್ರಕರಣದಲ್ಲಿ ದಿನಾಂಕ:-10-11-2023 ರಂದು ಆರೋಪಿಗಳಾದ 1] ಡಿ. ವಿಜಯ್ ಕುಮಾರ್ @ ವಿಜಿ 2] ವಿ.ಹರಿಪ್ರಸಾದ್ @ ಹರಿ @ ಗೌತಮ್ ರವರುಗಳನ್ನು ಪತ್ತೆ ಮಾಡಿ, ಒಟ್ಟು 13 ಮನೆಗಳ್ಳತನ ಪ್ರಕರಣಗಳಲ್ಲಿ ಕಳ್ಳತನ ಮಾಡಿದ್ದು, ಆರೋಪಿಗಳ ಕಡೆಯಿಂದ 28,74,850/- ರೂಗಳು ಬೆಲೆ ಬಾಳುವ 575 ಗ್ರಾಂ ತೂಕದ ಚಿನ್ನದ ವಡವೆಗಳನ್ನು ಮತ್ತು 4,22,000/- ರೂಗಳು ಬೆಲೆ ಬಾಳುವ 6.029 ಕೆಜಿ ಬೆಳ್ಳಿಯ ಅಭರಣಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೆ.

ಹೊಸಬಡಾವಣೆ ಠಾಣೆಯಲ್ಲಿ ಮೊ.ನಂ.103/2023 ಕಲಂ 397 ಐಪಿಸಿ

ದಿನಾಂಕ;20.09.2023 ರಂದು ಬೆಳಗ್ಗೆ 10.30 ಗಂಟೆಯಿಂದ ಬೆಳಗ್ಗೆ 11.30 ಗಂಟೆ ಸುಮಾರಿನಲ್ಲಿ ಪಿರ್ಯಾದಿಯಾದ ಶ್ರೀಮತಿ. ಜಿ.ಸಿ. ಚಂದ್ರಮ್ಮರವರು ಮನೆಯಲ್ಲಿರುವಾಗ್ಗೆ ಯಾರೋ ಅಪರಿಚಿತ ಸುಮಾರು 35 ವರ್ಷ ವಯಸ್ಸಿನ ಹೆಂಗಸು ಪಿರ್ಯಾದಿ ಮನೆಯೊಳಗೆ ಬಂದು ಪಿರ್ಯಾದಿಯ ಕೈಗಳನ್ನು ಕಟ್ಟಿ ಹಾಕಿ ಬಾಯಿಗೆ ಬಟ್ಟೆಯನ್ನು ತುರುಕಿ ಪಿರ್ಯಾದಿ ಕೊರಳಿನಲ್ಲಿದ್ದ ಸುಮಾರು 60 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋಗಿರುತ್ತಾರೆ. ಈ ಬಗ್ಗೆ ಹೊಸಬಡಾವಣೆ ಠಾಣೆಯಲ್ಲಿ ಮೊ.ನಂ.103/2023 ಕಲಂ 397 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿದ್ದು, ದಿನಾಂಕ:-01-10-2023 ರಂದು ಈ ಪ್ರಕರಣದ ಆರೋಪಿಗಳಾದ 1] ಪುಷ್ಪಬಾಯಿ @ ಬೇಬಿ 2] ಸೋಮಶೇಖರಯ್ಯ @ ಸೋಮ ರವರುಗಳನ್ನು ಪತ್ತೆ ಮಾಡಿ, ಆರೋಪಿಗಳ ಕಡೆಯಿಂದ 2,55,000/- ರೂಗಳು ಬೆಲೆ ಬಾಳುವ ಚಿನ್ನದ ಮಾಂಗಲ್ಯದ ಸರವನ್ನು ಅಮಾನತ್ತುಪಡಿಸಿಕೊಂಡಿರುತ್ತೆ.

ತುಮಕೂರು ನಗರ ಠಾಣಾ ಮೊ.ನಂ. 453/2023 ಕಲಂ 379 ಐ.ಪಿ.ಸಿ.

ದಿನಾಂಕ 19-10-2023 ರಂದು ಸಂಜೆ 06-30 ಗಂಟೆ ಸಮಯದಲ್ಲ ಶ್ರೀ ವೆಂಕಟೇಶ್ ತುಮಕೂರು ಅಮಾನಿಕೆರೆಯಲ್ಲ ಇರುವ ಗ್ಲಾಸ್ ಹೌಸ್ ನಲ್ಲ ಎಕ್ಸಿಬಿಷನ್ ನೋಡಲು ಹೋದಾಗ ದ್ವಿ ಚಕ್ರ ವಾಹನ ಸಂಖ್ಯೆ ಕೆಎ06 ಇಯು 7330 ಯನ್ನು ಗ್ಲಾಸ್ ಹೌಸ್ ಮುಂಬಾಗದ ಪಾರ್ಕಿಂಗ್ ನಲ್ಲ ನಿಲ್ಲಸಿದ್ದನ್ನು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದು, ತುಮಕೂರು ನಗರ ಠಾಣೆಯಲ್ಲಿ ಮೊ..ನಂ 453/2023 ಕಲಂ-379 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿದ್ದು ಕೇಸಿನ ಆರೋಪಿಯಾದ **ತಿಪ್ಪೇಶ್ ಬಿನ್ ಹನುಮಂತಪ್ಪ,** 33 **ವರ್ಷ, ಶಿಳ್ಳೆಕ್ಯಾತ ಜನಾಂಗ, ಗಾರೆ ಕೆಲಸ, ಬೂತಪ್ಪನ ದೇವಸ್ಥಾನ ಬುವನಹಳ್ಳಿ (ಪೋ), ಕಸಬಾ(ಹೊ), ಶಿರಾ(ತಾ) ತುಮಕೂರು ಜಿಲ್ಲೆ** ರವರನ್ನು ಪತ್ತೆ ಮಾಡಿ, ಆರೋಪಿಯನ್ನು ದಸ್ತಗಿರಿ ಮಾಡಿದ್ದು, ಆರೋಪಿಯ ಕಡೆಯಿಂದ ಸುಮಾರು 1.20.000 ರೂಗಳಷ್ಟು ಬೆಲೆ ಬಾಳುವ (1) ಕೆಎ.06.ಇಯು.7330 ನೇ ಹೊಂಡಾ ಕಂಪನಿಯ ಡ್ರೀಮ್ ಯುಗಾ ದ್ವಿ ಚಕ್ರ ವಾಹನ, (2) ಕೆಎ-06-ಇಪಿ-6846 ದ್ವಿ ಚಕ್ರ ವಾಹನ ಅಮಾನತ್ತುಪಡಿಸಿಕೊಂಡಿರುತ್ತೆ.

ಕ್ಯಾತ್ಸಂದ್ರ ಪೊಲೀಸ್ ಠಾಣಾ ಮೊ.ನಂ. 306/2023 ಕಲಂ 399, 402 ಐಪಿಸಿ

ದಿನಾಂಕ; 14-11-2023 ರಂದು ಕ್ಯಾತ್ಸಂದ್ರ ಪೊಲೀಸ್ ಠಾಣೆಯ ಪಿಎಸ್ಐ ಶ್ರೀ ಚೇತನ್ ಕುಮಾರ್ ಎಸ್.ಎಸ್ ರವರಿಗೆ ತುಮಕೂರು ತಾಲ್ಲೂಕ್ ಕೆಂಪೋಹಳ್ಳಿ ಗ್ರಾಮದ ಸಮೀಪ ಇರುವ ಶ್ರೀ ಬೈಲಾಂಜನೇಯಸ್ವಾಮಿ ದೇವಸ್ಥಾನದ ರಸ್ತೆಯಲ್ಲಿರುವ ಶ್ರೀ ಆಂಜನೇಯಸ್ವಾಮಿ ಆರ್ಚ ಬಳಿ 04-05 ಜನರು ಕೈಗಳಲ್ಲಿ ಮಾರಕ ಆಯುಧಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರನ್ನು ಹೆದರಿಸಿ ಅವರ ಬಳಿ ಇರುವ ಹಣ ಹಾಗೂ ಬೆಲೆ ಬಾಳುವ ವಸ್ತುಗಳನ್ನು

ದರೋಡೆ ಮಾಡಲು ಹೊಂಚು ಹಾಕುತ್ತಿರುತ್ತಾರೆಂದು ಬಂದ ಖಚಿತ ಮಾಹಿತಿ ಮೇರೆಗೆ ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ಠಾಣಾ ಮೊ.ನಂ. 306/2023 ಕಲಂ 399, 402 ಐಪಿಸಿ ರೀತ್ಯ ಪ್ರಕರಣ ದಾಖಲಾಗಿರುತ್ತದೆ. ಈ ಪ್ರಕರಣದಲ್ಲಿ ಆರೋಪಿಗಳಾದ 1) ದೇವರಾಜು @ ದೇವ ಬಿನ್ ಈರಣ್ಣ, 22 ವರ್ಷ, ಬಾರ್ ಬೆಂಡಿಂಗ್ ಕೆಲಸ, ಸಂಗಳಾಪುರ, ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕ್ 2) ರಮೇಶ @ ರಾಮ ಬಿನ್ ಲೇಟ್ ರಂಗಸ್ವಾಮಯ್ಯ, 25 ವರ್ಷ, ಗಾರೆ ಕೆಲಸ, ಯಡವನಹಳ್ಳಿ, ಸಿಎಸ್ ಪುರ ಹೋಬಳಿ, ಗುಬ್ಬಿ ತಾಲ್ಲೂಕ್, 3) ಟಿ.ಗಿರೀಶ @ ಕುರಿ ಬಿನ್ ತಿಪ್ಪೇಗೌಡ, 36 ವರ್ಷ, ಟ್ರ್ಯಾಕ್ಟರ್ ಚಾಲಕ, ಸೀಗೇಹಳ್ಳಿ, ಮಾಯಸಂದ್ರ ಹೋಬಳಿ, ತುರುವೇಕೆರೆ ತಾಲ್ಲೂಕ್ ತುಮಕೂರು ಜಿಲ್ಲೆ 4) ಲೋಕೇಶ @ ಬೆಳ್ಳಿ ಲೋಕೇಶ ಬಿನ್ ಶಿವಣ್ಣ, 35 ವರ್ಷ, ಡ್ರೈವರ್ ಕೆಲಸ, ವಿಪ್ರೋ ಸ್ಕೂಲ್ ಹತ್ತಿರ, ಹೆಬ್ಬೂರು, ತುಮಕೂರು ತಾಲ್ಲೂಕ್ 5) ಪುನೀತ್ ಎಂ.ಎಲ್ @ ಪುನಿ, ಬಿನ್ ಲೋಕೇಶ್, 20 ವರ್ಷ, ರಾಮಯ್ಯ ಕಾಲೇಜು ಹತ್ತಿರ, ಬೆಂಗಳೂರು, ಸ್ವಂತ ಊರು ಮಡಿಕೆಹಳ್ಳಿ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾಲ್ಲೂಕ್ ರವರುಗಳನ್ನು ದಸ್ತಗಿರಿ ಮಾಡಿ ವಿಚಾರ ಮಾಡಲಾಗಿ ಸದರಿಯವರು ಬೈಕ್ ಕಳವು ಬಗ್ಗೆ ಒಪ್ಪಿಕೊಂಡಿದ್ದು ಇವರ ಮಾಹಿತಿ ಮೇರೆಗೆ ಉಳಿದ ಆರೋಪಿಗಳಾದ 6) ರಾಕೇಶ @ ರಾಕಿ ಬಿನ್ ಚಂದ್ರಶೇಖರ್, 20 ವರ್ಷ, ರಾಯವಾರ, ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕ್ 7) ಶ್ರೀಧರ ಆರ್ ಎಸ್ @ ಪೂಜಾರಿ ಬಿನ್ ಶ್ರೀನಿವಾಸಮೂರ್ತಿ, 22 ವರ್ಷ, ರಾಯವಾರ, ಹೆಬ್ಬೂರು ಹೋಬಳಿ, ತುಮಕುರು ತಾಲ್ಲೂಕ್ ರವರುಗಳನ್ನು ದಸ್ತಗಿರಿ ಮಾಡಿ ಅವರುಗಳ ಕಡೆಯಿಂದ ಕ್ಯಾತ್ಸಂದ್ರ ಪೊಲೀಸ್ ಠಾಣೆಯ-02, ಹೆಬ್ಬೂರು ಪೊಲೀಸ್ ಠಾಣೆಯ-01, ತುಮಕೂರು ನಗರ ಪೊಲೀಸ್ ಠಾಣೆಯ-01, ಹೊಸಬಡಾವಣೆ ಪೊಲಿಸ್ ಠಾಣೆಯ-01, ಗುಬ್ಬಿ ಪೊಲೀಸ್ ಠಾಣೆಯ-01, ಕೆಂಗೇರಿ ಪೊಲೀಸ್ ಠಾಣೆಯ-01, ದಾಬಸಪೇಟೆ ಪೊಲಿಸ್ ಠಾಣೆಯ-01, ಜಮಖಂಡಿ ಪೊಲೀಸ್ ಠಾಣೆಯ-01, ಚಿಕ್ಕಬಳ್ಳಾಪುರ ಪೊಲೀಸ್ ಠಾಣೆಯ-01 ಪ್ರಕರಣಗಳಲ್ಲಿ ಒಟ್ಟು 5,00,000/- ರೂ ಬೆಲೆ ಬಾಳುವ 10 ದ್ವಿ ಚಕ್ರವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೆ.

ಮೇಲ್ಕಂಡ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ ಮಾನ್ಯ ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಅಶೋಕ್ ಕೆ.ವಿ, ಮಾನ್ಯ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿ.ಮರಿಯಪ್ಪ ರವರು ಸದರಿ ಪ್ರಕರಣದಲ್ಲಿ ಆರೋಪಿಗಳ ಪತ್ತೆಗಾಗಿ ತುಮಕೂರು ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಕೆ.ಆರ್.ಚಂದ್ರಶೇಖರ್ ರವರ ಮಾರ್ಗದರ್ಶನದಲ್ಲಿ ವಿಶೇಷ ತಂಡವನ್ನು ರಚನೆ ಮಾಡಿದ್ದು ತಂಡದ ಅಧಿಕಾರಿಗಳಾದ ತಿಲಕ್‌ಪಾರ್ಕ್ ವೃತ್ತದ ಸಿಪಿಐ ಪುರುಷೋತ್ತಮ. ಜಿ, ಕ್ಯಾತ್ಸಂದ್ರ ವೃತ್ತದ ಸಿಪಿಐ ರಾಮಪ್ರಸಾದ್, ನಿಸ್ತಂತು ವಿಭಾಗದ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಸುನೀಲ್‌ಕುಮಾರ್, ಜಯನಗರ ಠಾಣೆಯ ಪಿ.ಎಸ್.ಐ (ಕಾ&ಸು) ಶ್ರೀಮತಿ ಹೆಚ್.ಎನ್.ಮಹಾಲಕ್ಷ್ಮಮ್ಮ, ಹೊಸಬಡಾವಣೆ ಠಾಣೆಯ ಪಿ.ಎಸ್.ಐ ಹೆಚ್.ಡಿ. ವಿದ್ಯಾಶ್ರೀ, ತುಮಕೂರು ನಗರ ಠಾಣೆ ಪಿಎಸ್‌ಐ ಭಾರತಿ, ಕ್ಯಾತ್ಸಂದ್ರ ಠಾಣೆಯ ಪಿಎಸ್‌ಐ ಚೇತನ್‌ಕುಮಾರ್ ಹಾಗೂ ಅಪರಾಧ ಪತ್ತೆ ವಿಭಾಗದ ಸಿಬ್ಬಂದಿಗಳಾದ ಹನುಮರಂಗಯ್ಯ, ಸಿದ್ದಲಿಂಗರಾಧ್ಯ, ಚಾಲಕರಾದ ಸಿದ್ದೇಶ, ಜಯನಗರ ಠಾಣೆಯ ಸಿಬ್ಬಂದಿಗಳಾದ ನಿಜಾಮುದ್ದೀನ್ ಷಾ, ಲೋಕೇಶ್, ಹೊಸಬಡಾವಣೆ ಠಾಣೆಯ ಸಿಬ್ಬಂದಿಗಳಾದ ಸುನೀಲ್ ಕುಮಾರ್, ಜಗದೀಶ್, ಪ್ರಕಾಶ, ನೀಲಕಂಠ, ಮಹಿಳಾ ಸಿಬ್ಬಂದಿ ರೇಖಾಂಜಲಿ, ತುಮಕೂರು ನಗರ ಠಾಣೆ ದಿನೇಶ್, ಚಂದನ್, ರವಿಚಂದ್ರ, ಕ್ಯಾತ್ಸಂದ್ರ ಠಾಣೆಯ ಸಿಬ್ಬಂದಿಗಳಾದ ಹನುಮರಂಗಯ್ಯ, ಶಶಿಧರ್, ವೆಂಕಟೇಶ್, ಗಿರೀಶ, ಭೀಮನಗೌಡ ಕೊಳಬಾಳ, ಮಂಜುನಾಥ, ಸಂತೋಷ್, ಕಿರಣ್ ಹಾಗೂ ಟೆಕ್ನಿಕಲ್ ಸೆಲ್ ವಿಭಾಗದ ಹೆಚ್.ಸಿ.ನರಸಿಂಹರಾಜು, ರಮೇಶ್ ನಂದೀಶ್, ಚಾಲಕರು ರವರುಗಳು ಅರೋಪಿಗಳನ್ನು ಪತ್ತೆ ಮಾಡುವಲ್ಲಿ ಮತ್ತು ಕಳುವಾಗಿರುವ ಮಾಲನ್ನು ವಶಪಡಿಸಿಕೊಳ್ಳುವಲ್ಲಿ ಶ್ರಮಿಸಿದ್ದು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಅಶೋಕ್ ಕೆ.ವಿ. ಐ.ಪಿ.ಎಸ್. ರವರು ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗಳ ಕಾರ್ಯವನ್ನು ಶ್ಲಾಘಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಕಛೇರಿ,
ತುಮಕೂರು ಜಿಲ್ಲೆ.

ಪತ್ರಿಕಾ ಪ್ರಕಟಣೆ

ದಿನಾಂಕ.        /11/2023

ಸಿ.ಎಸ್ ಪುರ ಪೊಲೀಸ್ ಠಾಣೆ.

"ಜ್ಯುವೆಲರಿ ಅಂಗಡಿಗಳ ಕಳ್ಳತನ ಮಾಡುವ ವೃತ್ತಿ ಪರ ಅಂತರ ರಾಜ್ಯ "ಕುಕ್ರಾಲ" ಗ್ಯಾಂಗ್ ನ ಸದಸ್ಯರ ಬಂಧನ"

ದಿನಾಂಕ:12-10-2023 ರಂದು ರಾತ್ರಿ ಸುಮಾರು 7 ರಿಂದ 8 ಜನರು ಚಂದ್ರಶೇಖರ ಪುರ ಪೊಲೀಸ್ ಠಾಣಾ ಸರಹದ್ದು ಕೆ.ಜಿ ಟಂಪಲ್ ನಲ್ಲಿರುವ ಭವಾನಿ ಜ್ಯುವೆಲರಿ ಅಂಗಡಿಗೆ ಟೆರೇಸ್ ಮೇಲಿಂದ ಪ್ರವೇಶಿಸಿ ಗ್ಯಾಸ್ ಕಟರ್ ನಿಂದ ಜ್ಯುವೆಲರಿಯ ಮುಂಬಾಗಿಲನ್ನು ಕಟ್ ಮಾಡಿ ಒಳ ಪ್ರವೇಶಿಸಿ ಸುಮಾರು 6 ಕೆ.ಜಿ ಬೆಳ್ಳಿಯ ಆಭರಣಗಳನ್ನು ಕಳವು ಮಾಡಿದ್ದು, ಜ್ಯುವೆಲರಿ ಅಂಗಡಿಗೆ ಅಳವಡಿಸಿದ್ದ ಸೆಕ್ಯೂರಿಟಿ ಸಿಸ್ಟಂ ಅಲಾರಮ್ ಶಬ್ದದಿಂದ ಅಂಗಡಿ ಮಾಲೀಕರು ಹಾಗೂ ಗ್ರಾಮಸ್ಥರು ಕಳ್ಳರನ್ನು ಓಡಿಸಿಕೊಂಡು ಹೋದಾಗ ಕಳ್ಳರು ಗ್ರಾಮಸ್ಥರ ಮೇಲೆ ಫೈರಿಂಗ್ ಮಾಡಿ ತಪ್ಪಿಸಿಕೊಂಡಿದ್ದು, ಈ ಸಂಬಂಧ ಸಿ.ಎಸ್ ಪುರ ಪೊಲೀಸ್ ಠಾಣಾ ಮೊ.ನಂ 87/2023 ಕಲಂ 457, 380 ಐಪಿಸಿ ಮತ್ತು 25, 27 ಇಂಡಿಯನ್ ಆರ್ಮ್ಸ್ ಆಕ್ಟ್ ರೀತ್ಯ ಪ್ರಕರಣ ದಾಖಲಾಗಿರುತ್ತೆ ಹಾಗೂ ದಿನಾಂಕ:17-10-2023 ರಂದು ಕೆ.ಜಿ ಟೆಂಪಲ್ ನಲ್ಲಿರುವ ಲಕ್ಷ್ಮೀ ಜ್ಯುವೆಲರಿಗೆ ಗ್ಯಾಸ್ ಕಟರ್ ನಿಂದ ರೋಲಿಂಗ್ ಶೆಲ್ಟರ್ ಕಟ್ ಮಾಡಿ ಕಳ್ಳತನ ಮಾಡಲು ಪ್ರಯತ್ನಿಸುತ್ತಿದ್ದವರನ್ನು ರಾತ್ರಿ ಗಸ್ತಿನಲ್ಲಿದ್ದ ಸಿ.ಎಸ್ ಪುರ ಪೊಲೀಸ್ ಠಾಣೆಯ ಪಿ.ಎಸ್.ಐ ಹಾಗೂ ಸಿಬ್ಬಂದಿಗಳು ಕಳ್ಳರನ್ನು ಬೆನ್ನತ್ತಿ, ರಶೀದ್ ಖಾನ್ ಮತ್ತು ಮುಶ್ರಫ್ ರವರುಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ಇವರು ಉತ್ತರ ಪ್ರದೇಶದ ಮೂಲದವರಾಗಿದ್ದು, ಇವರ ಬಳಿ ಇದ್ದ 1 ಕಂಟ್ರಿ ಪಿಸ್ತೂಲ್ & 05 ಗುಂಡುಗಳು ಹಾಗೂ ಗ್ಯಾಸ್ ಕಟರ್‌ಗೆ ಸಂಬಂಧಿಸಿದ ಇತರೆ ವಸ್ತುಗಳು ಮತ್ತು ಆರೋಪಿಗಳು ಬಂದಿದ್ದ ಮಹಿಂದ್ರಾ ಬುಲೆರೋ ವಾಹನ ಅಮಾನತ್ತು ಪಡಿಸಿದ್ದು, ಈ ಬಗ್ಗೆ ಸಿ.ಎಸ್ ಪುರ ಪೊಲೀಸ್ ಠಾಣಾ ಮೊ.ನಂ 88/2023 ಕಲಂ 457, 380, 511 ಐಪಿಸಿ ರೀತ್ಯ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿರುತ್ತೆ.

ಪ್ರಕರಣದ ತೀವ್ರತೆಯನ್ನು ಅರಿತ ಮಾನ್ಯ ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಅಶೋಕ್.ಕೆ.ವಿ, ಐಪಿಎಸ್ ರವರು ತುಮಕೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಶ್ರೀ ವಿ.ಮರಿಯಪ್ಪ. ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಆರೋಪಿಗಳ ಪತ್ತೆ ಬಗ್ಗೆ ವಿಶೇಷ ತನಿಖಾ ತಂಡವನ್ನು ನೇಮಿಸಿದ್ದು, ದಸ್ತಗಿರಿಯಾಗಿದ್ದ ರಶೀದ್ ಖಾನ್ ಮತ್ತು ಮುಶ್ರಫ್ ರವರು ನೀಡಿದ ಮಾಹಿತಿ ಮೇರೆಗೆ ಶಿರಾ ಉಪ ವಿಭಾಗದ ಡಿ.ವೈ.ಎಸ್.ಪಿ ಬಿ.ಕೆ ಶೇಖರ್ ರವರ ನೇತೃತ್ವದಲ್ಲಿ ಗುಬ್ಬಿ ವೃತ್ತದ ಸಿಪಿಐ ಗೋಪಿನಾಥ್ ರವರು, ಶಿರಾ ಗ್ರಾಮಾಂತರ ವೃತ್ತದ ಸಿಪಿಐ ರಾಘವೇಂದ್ರ ಕೆ.ಆರ್ ರವರು ಹಾಗೂ ಸಿ.ಎಸ್ ಪುರ ಪೊಲೀಸ್ ಠಾಣೆಯ ಪಿ.ಎಸ್.ಐ ಶಿವಕುಮಾರ್ ಹಾಗೂ ಸಿಬ್ಬಂದಿಗಳಾದ ಮಧುಸೂದನ್, ಮೊಹಮದ್ ಕಲಂದರ್, ಶಕೀಲ್ ಅಹಮದ್ ಮಾಶ್ಯಾಳ್, ಜಗನ್ ನಾಯ್ಕ, ವಿಜಯ್‌ಕುಮಾರ್, ರಾಜು ಜಿ, ರಾಜು ಡಿ, ಕೃಷ್ಣೇಗೌಡ, ಮಧುಸೂದನ್, ಜೀಪ್ ಚಾಲಕರಾದ ಭರತ್ ಕುಮಾರ್ ಮತ್ತು ಜಿಲ್ಲಾ ಪೊಲೀಸ್ ಕಛೇರಿಯ ಸಿಬ್ಬಂದಿಗಳಾದ ದುಶ್ಯಂತ್ ಮತ್ತು ನರಸಿಂಹರಾಜುರವರುಗಳು ಕಾರ್ಯ ಪ್ರವೃತ್ತರಾಗಿ ಉತ್ತರ ಪ್ರದೇಶ ಮೂಲದ ಕುಖ್ಯಾತ "ಕುಕ್ರಾಲ" ಗ್ಯಾಂಗ್ ನ ಸದಸ್ಯರನ್ನು ಕಾರವಾರದಲ್ಲಿ ಬಂಧಿಸಿ ಆರೋಪಿಗಳು ಬಂದಿದ್ದ ಸ್ವಿಫ್ಟ್ ಕಾರ್ ಹಾಗೂ ಗ್ಯಾಸ್ ಕಟರ್ ಉಪಕರಣಗಳನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿರುತ್ತಾರೆ. ಸದರಿ ಆರೋಪಿತರು ಕಾರವಾರದ ಜ್ಯುವೆಲರಿ ಅಂಗಡಿಯೊಂದರ ಕಳವಿಗಾಗಿ ಬಂದಿದ್ದು, ಅವರುಗಳನ್ನು ವಿಶೇಷ ತನಿಖಾ ತಂಡ ಬೆಂಗಳೂರಿನಿಂದ ಬೆನ್ನತ್ತಿ ಕಾರವಾರದಲ್ಲಿ ಗ್ಯಾಂಗ್ ನ ಎಲ್ಲಾ ಸದಸ್ಯರನ್ನು ದಸ್ತಗಿರಿ ಮಾಡುವಲ್ಲಿ ಯಶಸ್ವಿಯಾಗಿದೆ.

ದಸ್ತಗಿರಿ ಮಾಡಿರುವ "ಕುಕ್ರಾಲ" ಗ್ಯಾಂಗ್ ನ ಸದಸ್ಯರ ವಿವರ

1] ಉತ್ತಮ್ ಭಗವಾನ್ ಕಾರಟ್ ಬಿನ್ ಭಗವಾನ್ ನಾಮದೇವ್ ಕಾರಟ್, 37 ವರ್ಷ, ಬುಲ್ಡಾನ ಜಿಲ್ಲೆ,   ಮಹರಾಷ್ಟ್ರ ರಾಜ್ಯ.
2] ಯಶ್ವಂತ್ @ ರಾಹುಲ್ ಬಿನ್ ಶೇಷನಾರಾಯಣ, 31 ವರ್ಷ, ಅಂಬೋಡ್ಕರ್ ನಗರ ಜಿಲ್ಲೆ, ಉತ್ತರ ಪ್ರದೇಶ ರಾಜ್ಯ.
3] ಬಾಬು ಖಾನ್ ಬಿನ್ ಲೇಟ್ ಕೌಷರ್ ಖಾನ್, 51 ವರ್ಷ, ಬರೇಲಿ, ಉತ್ತರ ಪ್ರದೇಶ ರಾಜ್ಯ.
4] ಖಿಷರದ್ ಅಲಿ ಬಿನ್ ಲೇಟ್ ಸರ್ತಾರ್ ಅಲಿ, 34 ವರ್ಷ, ಬದಾವ್ ಜಿಲ್ಲೆ, ಉತ್ತರ ಪ್ರದೇಶ ರಾಜ್ಯ.
5] ಮೊಹಮ್ಮದ್ ಸಾರಿಂ ಖಾನ್ @ ಗುಡ್ಡು ಬಿನ್ ಅಪ್ತಾಬ್ ಖಾನ್, 39 ವರ್ಷ, ಬದಾವ್ ಜಿಲ್ಲೆ, ಉತ್ತರ ಪ್ರದೇಶ ರಾಜ್ಯ.
6] ಅಬ್ದುಲ್ ವಾಹಿದ್ ಬಿನ್ ಲೇಟ್ ಬಾರೀಸ್ ಅಲಿ, 40 ವರ್ಷ, ಬದಾವ್ ಜಿಲ್ಲೆ, ಉತ್ತರ ಪ್ರದೇಶ ರಾಜ್ಯ.
7] ಅಬ್ದುಲ್ ಮಲ್ಲಿಕ್ ಬಿನ್ ಸರ್ತಾಜ್ ಅಲಿಖಾನ್, ದಾತಗಂಜ್, ಬದಾವ್ ಜಿಲ್ಲೆ, ಉತ್ತರ ಪ್ರದೇಶ ರಾಜ್ಯ.
8] ಅಮೀರ್ ಖಾನ್ ಬಿನ್ ಲೇಟ್ ರಫೀಕ್ ಖಾನ್, 31 ವರ್ಷ, ಬದಾವ್ ಜಿಲ್ಲೆ, ಉತ್ತರ ಪ್ರದೇಶ ರಾಜ್ಯ.

ಮೇಲ್ಕಂಡ ಆರೋಪಿತರು ಜ್ಯುವೆಲರಿ ಅಂಗಡಿಗಳನ್ನು ಟಾರ್ಗೆಟ್ ಮಾಡಿ ಯಾರೂ ಇಲ್ಲದೇ ಇರುವ ಸಮಯದಲ್ಲಿ ಅತ್ಯಾಧುನಿಕ ಉಪಕರಣಗಳಾದ ಗ್ಯಾಸ್ ಕಟರ್, ಹ್ಯಾಂಡ್ ಗ್ಲೌಸ್, ಮಾಸ್ಕ್, ಸ್ಪ್ರೇ ಗಳನ್ನು ಉಪಯೋಗಿಸಿ ಕಳ್ಳತನ ಮಾಡುವ ಕುಖ್ಯಾತ ಕುಕ್ರಾಲ ಗ್ಯಾಂಗ್ ನ ಸದಸ್ಯರಾಗಿರುತ್ತಾರೆ.

ಇವರುಗಳು ಈಗಾಗಲೇ ತಮಿಳುನಾಡು ಮತ್ತು ತೆಲಂಗಾಣದ ವಿವಿಧ ಕಡೆಗಳಲ್ಲಿ ಕರ್ನಾಟಕದ ಬೆಂಗಳೂರು, ಬೆಳಗಾವಿ ಮತ್ತು ಚಿಂಚೋಳಿಯಲ್ಲಿ ಜ್ಯುವೆಲರಿ/ಬ್ಯಾಂಕ್ ಗಳಲ್ಲಿ ಜರುಗಿರುವ ಕಳ್ಳತನಗಳಲ್ಲಿ ಬಾಗಿಯಾಗಿರುತ್ತಾರೆ. ಗ್ಯಾಂಗ್ ನ ಸದಸ್ಯರ ದಸ್ತಗಿರಿಯಿಂದಾಗಿ ಬೆಂಗಳೂರು ನಗರದ ಗೊರಗುಂಟೆ ಪಾಳ್ಯದ ಜ್ಯುವೆಲರಿ ಅಂಗಡಿ ಹಾಗೂ ಕಾರವಾರದ ಜ್ಯುವೆಲರಿ ಅಂಗಡಿಯಲ್ಲಿ ಆಗಬಹುದಾದ ಕಳ್ಳತನಗಳು ತಪ್ಪಿದಂತಾಗಿರುವುದಲ್ಲದೇ ಇನ್ನು ಮುಂದೆ ರಾಜ್ಯದಲ್ಲಿ ಜರುಗಬಹುದಾಗಿದ್ದ ಅನೇಕ ಜ್ಯುವೆಲರಿ ಅಂಗಡಿ/ಬ್ಯಾಂಕ್ ಗಳ ಕಳ್ಳತನಗಳನ್ನು ತಡೆಗಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ.

ಮೇಲ್ಕಂಡ ಆರೋಪಿತರಿಗೆ ಕುಕ್ರಾಲದ ವ್ಯಕ್ತಿಯೊಬ್ಬ ಹಣಕಾಸಿನ ನೆರವು ನೀಡಿ ಜ್ಯುವೆಲರಿ ಅಂಗಡಿ/ಬ್ಯಾಂಕುಗಳನ್ನು ದೋಚುವ ಬಗ್ಗೆ ಮಾರ್ಗದರ್ಶನ ನೀಡಿ ಕರ್ನಾಟಕಕ್ಕೆ ಕಳುಹಿಸುತ್ತಿದ್ದು, ಆತನನ್ನು ಸಹ ದಸ್ತಗಿರಿ ಮಾಡುವ ಪ್ರಯತ್ನದಲ್ಲಿದೆ. ತನಿಖಾ ತಂಡದ ಕಾರ್ಯವನ್ನು ಡಾ// ಬಿ.ಆರ್ ರವಿಕಾಂತೇಗೌಡ, ಐಪಿಎಸ್, ಐ.ಜಿ.ಪಿ, ಕೇಂದ್ರವಲಯ, ಬೆಂಗಳೂರು ರವರು ಶ್ಲಾಘಿಸಿದ್ದು, ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಅಶೋಕ್.ಕೆ.ವಿ, ಐಪಿಎಸ್ ರವರು ಸೂಕ್ತ ಬಹುಮಾನವನ್ನು ಘೋಷಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಕಛೇರಿ,
ತುಮಕೂರು.

ದಿನಾಂಕ:06-11-2023

:-: ಪತ್ರಿಕಾ ಪ್ರಕಟಣೆ :-:

ಮಾದಕ ವಸ್ತು ಗಾಂಜಾವನ್ನು ಸಾಗಾಟ ಮಾಡುತ್ತಿದ್ದ ನಾಲ್ಕು ಆರೋಪಿಗಳ ಬಂಧನ
1,20,000/-ರೂ ಬೆಲೆ ಬಾಳುವ ಗಾಂಜಾ ಮತ್ತು ಕಾರು ವಶ.

* * * * *

ದಿನಾಂಕ : 04-11-2023 ರಂದು ನಾಲ್ಕು ಜನ ಆಸಾಮಿಗಳು ತುಮಕೂರು ನಗರದ ಬೆಳಗುಂಬ ರಸ್ತೆಯಲ್ಲಿ ಅಕ್ರಮವಾಗಿ ಗಾಂಜಾವನ್ನು ಸಾಗಾಟ ಮಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಸಿ.ಇ.ಎನ್ ಪೊಲೀಸ್ ಠಾಣೆಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ರವರಾದ ಶ್ರೀ ಪ್ರಸನ್ನ ಕುಮಾರ್ ಹಾಗೂ ಸಿಬ್ಬಂದಿಗಳು ಮಾರಾಟ ಮಾಡುವ ಸಲುವಾಗಿ ಅಕ್ರಮವಾಗಿ ಗಾಂಜಾವನ್ನು ಇಟ್ಟುಕೊಂಡಿದ್ದ ಆರೋಪಿಗಳಾದ

1) ಅಮಾನ್ ಬಿನ್ ಸಲೀಂ 23 ವರ್ಷ, 1ನೇ ಕ್ರಾಸ್, ಶಾರಾದಾದೇವಿನಗರ, ಬೆಳಗುಂಬ ರಸ್ತೆ, ತುಮಕೂರು
2) ಮುದಾಸೀರ್ ಅಹಮದ್ ಷರೀಫ್ ಬಿನ್ ಫಯಾಜ್ ಅಹಮದ್ ಷರೀಫ್. 30 ವರ್ಷ, 1ನೇ ಕ್ರಾಸ್, ಶ್ರೀರಾಮನಗರ, ತುಮಕೂರು
3) ಪ್ರಶಾಂತ್ ಬಿನ್ ನರಸಿಂಹಮೂರ್ತಿ, 20 ವರ್ಷ, ಭಾಗ್ಯಮಂದಿರ, ಕೋತಿತೋಪು, ತುಮಕೂರು ನಗರ,
4) ಮುಬಾರಕ್ ಪಾಷ ಬಿನ್ ಖಲೀಂ ಪಾಷ, 37 ವರ್ಷ, 13ನೇ ಕ್ರಾಸ್. ಪಿ.ಹೆಚ್. ಕಾಲೋನಿ, ತುಮಕೂರು ನಗರ

ರವರುಗಳನ್ನು ವಶಕ್ಕೆ ಪಡೆದು ಅವರುಗಳು ಮಾರಾಟ ಮಾಡಿ ಹಣ ಗಳಿಸುವ ಸಲುವಾಗಿ ಅಕ್ರಮವಾಗಿ ವಶದಲ್ಲಿ ಇಟ್ಟುಕೊಂಡಿದ್ದ 1,20,000/-ರೂ ಬೆಲೆ ಬಾಳುವ 4 ಕೆಜಿ 330 ಗ್ರಾಂ ತೂಕದ ಒಣಗಿದ ಗಾಂಜಾ ಅಮಾನತ್ತು ಪಡಿಸಿಕೊಂಡು ಕಾನೂನು ರೀತ್ಯಾ ಕ್ರಮ ಕೈಗೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿರುತ್ತದೆ.

ಸದರಿ ಪ್ರಕರಣದ ಆರೋಪಿಗಳು ಮತ್ತು ಗಾಂಜಾ ಮಾದಕ ವಸ್ತುವನ್ನು ವಶಪಡಿಸಿಕೊಳ್ಳಲು ಶ್ರಮಿಸಿದ ಆರೋಪಿಗಳ ಬಂಧನಕ್ಕೆ ಶ್ರಮಿಸಿದ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಶ್ರೀ ವಿ. ಮರಿಯಪ್ಪ ಕೆ.ಎಸ್.ಪಿ.ಎಸ್, ಹಾಗೂ ತುಮಕೂರು ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ ಕೆ.ಆರ್. ಚಂದ್ರಶೇಖರ್. ಕೆ.ಎಸ್.ಪಿ.ಎಸ್ ರವರುಗಳ ಮಾರ್ಗದರ್ಶನದಲ್ಲಿ ಸಿ.ಇ.ಎನ್ ಪೊಲೀಸ್ ಪೊಲೀಸ್ ಠಾಣೆಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ರವರಾದ ಶ್ರೀ ಪ್ರಸನ್ನ ಕುಮಾರ್, ಎ.ಎಸ್.ಐ ಮಧುಸೂದನ್, ಹಾಗೂ ಸಿಬ್ಬಂದಿಗಳಾದ ಸೈಮನ್ ವಿಕ್ಟರ್, ಶಾಂತಕುಮಾರ್, ನಾರಾಯಣ್, ಶಿವರಾಂ, ಇನಾಯತ್ ಉಲ್ಲಾ ಖಾನ್, ದ್ವಾರಕೀಶ್, ನಟರಾಜು, ರಘು, ಹರೀಶ್, ಶಿವ ಪ್ರಸಾದ್, ಮಾರುತೀಶ್ ಚಾಲಕರಾದ ಗಿರೀಶ್ ರವರುಗಳ ಕಾರ್ಯವನ್ನು ಮಾನ್ಯ ಪೊಲೀಸ್ ಅಧೀಕ್ಷಕರಾದ ಶ್ರೀ ಅಶೋಕ್.ಕೆ.ವಿ. ಐ.ಪಿ.ಎಸ್ ರವರು ಶ್ಲಾಘಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಕಛೇರಿ,
ತುಮಕೂರು ಜಿಲ್ಲೆ.

ದಿನಾಂಕ: 04/11/2023

:-: ಪತ್ರಿಕಾ ಪ್ರಕಟಣೆ :-:

**ಅಡಿಕೆ ತೋಟಗಳಲ್ಲಿ ಅಡಿಕೆ ಫಸಲನ್ನು ಕಳ್ಳತನ ಮಾಡುತ್ತಿದ್ದ ಆರೋಪಿಗಳ ಬಂಧನ**

******

ದಿನಾಂಕ: 25/09/2023 ರಂದು ಯೋಗೀಶ್ ಬಿನ್ ಲೇಟ್ ಕೃಷ್ಣಪ್ಪ, ಹನುಮಾಪುರ ಗ್ರಾಮ, ಕುಣಿಗಲ್ ತಾಲ್ಲೂಕ್ ರವರು ಕುಣಿಗಲ್ ಪೊಲೀಸ್ ಠಾಣೆಗೆ ಹಾಜರಾಗಿ ದಿನಾಂಕ:-23/09/2023 ರ ರಾತ್ರಿ ಬೆಂಗಳೂರು-ಹಾಸನ ರಾಷ್ಟ್ರೀಯ ಹೆದ್ದಾರಿ ಸಮೀಪ ಹನುಮಾಪುರ ಗ್ರಾಮದಲ್ಲಿರುವ ಬೇಗೂರು ಸರ್ವೆ ನಂ-201/1 ರ ಜಮೀನಿನಲ್ಲಿರುವ ತಮ್ಮ ಅಡಿಕೆ ತೋಟದಲ್ಲಿ 550 ಅಡಿಕೆ ಗಿಡಗಳಿದ್ದು ಫಸಲಿಗೆ ಬಂದಿರುವ ಸುಮಾರು 220 ಗಿಡಗಳಲ್ಲಿ ಸುಮಾರು 25 ಕ್ವಿಂಟಾಲ್ ನಷ್ಟು ಹಸಿ ಅಡಿಕೆ ಗೊನೆಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಇದರಿಂದ ನನಗೆ ಸುಮಾರು 1,50,000 ರೂ ನಷ್ಟವಾಗಿರುತ್ತೆ ಎಂದು ಇತ್ಯಾದಿಯಾಗಿ ನೀಡಿದ ದೂರಿನ ಮೇರೆಗೆ ಕುಣಿಗಲ್ ಪೊಲೀಸ್ ಠಾಣಾ ಮೊನಂ-346/2023 ಕಲಂ-379 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ.

ಸದರಿ ಪ್ರಕರಣದ ಆರೋಪಿಗಳು ಮತ್ತು ಮಾಲು ಪತ್ತೆ ಬಗ್ಗೆ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಿದ್ದು, ಆರೋಪಿಗಳಾದ

(1) ರವಿ ಬಿನ್ ಲೇಟ್ ಅಣ್ಣಯ್ಯ, 58ವರ್ಷ, , 1 ನೇ ಕ್ರಾಸ್, ಬಿಸಿಲೆಮಾರಮ್ಮನ ದೇವಸ್ಥಾನದ ಹಿಂಭಾಗ, ಮಂಡ್ಯಕಲ್ಲಳ್ಳಿ, ಮಂಡ್ಯ ಜಿಲ್ಲೆ.

(2) ಅಭಿಜಿತ್ ಕೆ.ಆರ್. ಬಿನ್ ರಾಜೇಶ್ ಪಿ. 25 ವರ್ಷ, , ಲಾರಿ ಡ್ರೈವರ್ ಕೆಲಸ, ಕಾಳೇಗೌಡರ ವಠಾರ, 03 ನೇ ಕ್ರಾಸ್, ಹಲೇ ರೋಡ್, ಮಂಡ್ಯ ಕಲ್ಲಳ್ಳಿ, ಮಂಡ್ಯ ಟೌನ್.

(3) ಅಬಿಷೇಕ್ ಕೆ.ಆರ್. ಬಿನ್ ರಾಜೇಶ್ ಪಿ. 25 ವರ್ಷ, , ಲಾರಿ ಡ್ರೈವರ್ ಕೆಲಸ, ಕಾಳೇಗೌಡರ ವಟಾರ, 03 ನೇ ಕ್ರಾಸ್, ಹಲೇ ರೋಡ್, ಮಂಡ್ಯ ಕಲ್ಲಳ್ಳಿ, ಮಂಡ್ಯ ಟೌನ್

(4) ಮಂಜುನಾಥ ಬಿ.ಕೆ. ಬಿನ್ ಲೇಟ್ ಕಾಳಚನ್ನೇಗೌಡ, 27ವರ್ಷ, , ಗಾರೆ ಕೆಲಸ ಮತ್ತು ವ್ಯವಸಾಯ, ಬೆಟ್ಟಹಳ್ಳಿ, ದುದ್ದ ಹೋಬಳಿ, ಮಂಡ್ಯ ತಾಲ್ಲೂಕ್ ಮತ್ತು ಮಂಡ್ಯ ಜಿಲ್ಲೆ.

(5) ಎಂ.ಕೆ. ಮನು ಬಿನ್ ಕೃಷ್ಣಾಚಾರ್, 25 ವರ್ಷ, ಲಾರಿ ಡ್ರೈವರ್ ಕೆಲಸ, ಜಿ.ಮಲ್ಲಿಗೆರೆ, ದುದ್ದ ಹೋಬಳಿ, ಮಂಡ್ಯ ತಾಲ್ಲೂಕ್ ಮತ್ತು ಮಂಡ್ಯ ಜಿಲ್ಲೆ.

ಸದರಿ ಆರೋಪಿತರುಗಳಿಂದ ಕುಣಿಗಲ್ ಪೊಲೀಸ್ ಠಾಣೆಯ 01 ಪ್ರಕರಣ, ಹುಲಿಯೂರುದುರ್ಗ ಪೊಲೀಸ್ ಠಾಣೆಯ 01 ಪ್ರಕರಣ ಪತ್ತೆಯಾಗಿದ್ದು ಸದರಿ ಆರೋಪಿತರುಗಳಿಂದ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಏ೦13 ಅ-5531 ನೇ ನಂಬರಿನ ಟಾಟಾ ಎಸಿಇ ವಾಹನ ಮತ್ತು ಅಡಿಕೆಗೊನೆಗಳನ್ನು ಮಾರಾಟ ಮಾಡಿದ್ದ ಹಣದ ಪೈಕಿ 6000 ರೂ ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತೆ.

ಸದರಿ ಪ್ರಕರಣದ ಆರೋಪಿಗಳ ಮತ್ತು ಮಾಲು ಪತ್ತೆ ಹಚ್ಚಲು ಮರಿಯಪ್ಪ. ವಿ. ಕೆ.ಎಸ್.ಪಿ.ಎಸ್. ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಹಾಗೂ ಲಕ್ಷ್ಮೀಕಾಂತ್.ಆರ್. ಕೆ.ಎಸ್.ಪಿ.ಎಸ್. ಡಿ.ಎಸ್.ಪಿ. ಕುಣಿಗಲ್ ಉಪ ವಿಭಾಗ ರವರ ಮಾರ್ಗದರ್ಶನದಲ್ಲಿ ನವೀನ ಗೌಡ. ಎಸ್.ಬಿ. .ಪಿ.ಐ. ಕುಣಿಗಲ್ ಪೊಲೀಸ್ ಠಾಣೆ. ರವರ ನೇತೃತ್ವದಲಿ ಕೃಷ್ಣ ಕುಮಾರ್. ಪಿ,ಎಸ್.ಐ ಸಿಬ್ಬಂದಿಗಳಾದ ನಟರಾಜು, ಮಲ್ಲೇಶ್.ಟಿ. ಹನುಮಂತ, ಮಂಜುನಾಥ, ನವೀನ್ ಕುಮಾರ್ ಹಾಗೂ ಜಿಲ್ಲಾ ಪೊಲೀಸ್ ಕಛೇರಿಯ ನರಸಿಂಹರಾಜು ರವರುಗಳ ಪತ್ತೆ ತಂಡವನ್ನು ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಅಶೋಕ್ ಕೆ.ವಿ. ಐ.ಪಿ.ಎಸ್. ರವರು ಅಭಿನಂದಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಕಛೇರಿ,
ತುಮಕೂರು ಜಿಲ್ಲೆ.

ಪತ್ರಿಕಾ ಪ್ರಕಟಣೆ.

## ಅಕ್ರಮ ಮಣ್ಣು ಸಾಗಾಣಿಕೆ ಮಾಡುತ್ತಿದ್ದವರ ಮೇಲೆ ದಾಳಿ.

ದಿನಾಂಕ. 04-11-2023

ಮಧುಗಿರಿ ತಾಲ್ಲೋಕ್ ದೊಡ್ಡೇರಿ ಹೋಬಳಿ, ಮದ್ದೇರಹಳ್ಳಿ ಗ್ರಾಮದ ಸ.ನಂ-14 ರಿಂದ ದುರಸ್ತಿಯಾದ ಹೊಸ ಸರ್ವೆ ನಂ:53 ಸರ್ಕಾರಿ ಖರಾಬು ಜಮೀನಿನಲ್ಲಿ ಅಕ್ರಮವಾಗಿ ಮಣ್ಣು ತೆಗೆದು ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಮಾಹಿತಿ ತಿಳಿದ ಕೂಡಲೇ ಮಧುಗಿರಿ ತಾಲ್ಲೋಕ್ ತಹಸಿಲ್ದಾರ್ ರವರು ಸ್ಥಳೀಯ ಬಡವನಹಳ್ಳಿ ಪೊಲೀಸರ ಸಹಕರದೊಂದಿಗೆ ದಿನಾಂಕ:02-11-2023 ರಂದು ಮದ್ಯಾಹ್ನ ಸುಮಾರು 3.20 ರ ಸಮಯಕ್ಕೆ ದಿಡೀರ್ ದಾಳಿ ನಡೆಸಿ ಸದರಿ ಸರ್ವೆ ನಂಬರ್‌ನ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಮಣ್ಣು ತೆಗೆದು ಸಾಗಾಣಿಕೆ ಮಾಡುತಿದ್ದ 1] ಕೆಎ-52-ಎ-7884 2] ಕೆಎ-51-ಡಿ-6307 3] ಕೆಎ-52-ಎ-7885 ನಂಬರಿನ ಮೂರು ಟಿಪ್ಪರ್ ಲಾರಿಗಳನ್ನು ಹಾಗೂ ನಂ:ಐಕ40ಈ0004ಈ2, ಐಕ09526152[ಏಚಿಛಿಣಠಡಿಥಿ] ಒಂದು ಇಟಾಚಿ ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ಬಡವನಹಳ್ಳಿ ಪೊಲೀಸ್ ಠಾಣೆಯಲ್ಲಿ ಮೊ.ನಂ:105/2023 ಕಲಂ 379 ಐಪಿಸಿ ರೆ/ವಿ 21 ಎಂ.ಎಂ.ಆರ್.ಡಿ. ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಿಕೊಂಡು ಆರೋಪಿತರನ್ನು ದಸ್ತಗಿರಿ ಮಾಡಬೇಕಾಗಿರುತ್ತದೆ.

### ಕೋರ ಪೊಲೀಸ್ ಠಾಣಾ ಮೊ.ನಂ. 145/2023 ಕಲಂ 379 ಐಪಿಸಿ

ದಿನಾಂಕ: 03/11/2023 ರಂದು ಅರುಣ್ ಕುಮಾರ್ ಬಿನ್ ರಾಮಯ್ಯ, ರಾಜಸ್ವ ನಿರೀಕ್ಷಕರು, ಕೋರ ಹೋಬಳಿ, ತುಮಕೂರು ತಾಲ್ಲೂಕ್, ರವರು ಠಾಣೆಗೆ ಹಾಜರಾಗಿ. ಕೋರ ಹೋಬಳಿ, ಸೋಗೇನಹಳ್ಳಿ ಸರ್ವೆ ನಂಬರ್ 17/3 ರಲ್ಲಿ, ಕೆಎ-06 ಎಬಿ-643 ನೇ ಟಿಪ್ಪರ್ ಲಾರಿಯಲ್ಲಿ, ಲಾರಿ ಚಾಲಕ ಅಕ್ರಮವಾಗಿ ಕಳ್ಳತನದಿಂದ ಮಣ್ಣು ತುಂಬಿಕೊಂಡು ಹೋಗುತ್ತಿದ್ದು, ನಮ್ಮನ್ನು ಕಂಡು ಚಾಲಕನು ಲಾರಿಯನ್ನು ನಿಲ್ಲಿಸಿ ಸ್ಥಳದಿಂದ ಪರಾರಿಯಾಗಿರುತ್ತಾನೆ. ಅಕ್ರಮವಾಗಿ ಕಳ್ಳತನದಿಂದ ಮಣ್ಣನ್ನು ತುಂಬಿ ಸಾಗಿಸುತ್ತಿದ್ದ, ಕೆಎ-06 ಎಬಿ-643 ನೇ ಟಿಪ್ಪರ್ ಲಾರಿಯ ಮಾಲೀಕನ ವಿರುದ್ದ, ಲಾರಿ ಚಾಲಕ ವಿರುದ್ದ ಹಾಗೂ ಸ,ನಂ 17/3 ಜಮೀನಿನ ಮಾಲೀಕರಾದ ಉಮೇಶ್ ಬಿನ್ ಸಿದ್ದಪ್ಪ ರವರ ವಿರುದ್ದ ಕಾನೂನು ಕ್ರಮ ಜರುಗಿಸಬೇಕೆಂದು ನೀಡಿದ ದೂರಿನ ಮೇರೆಗೆ, ಕೋರ ಪೊಲೀಸ್ ಠಾಣೆಯಲ್ಲಿ "ಮೊನಂ 145/2023 ಕಲಂ 379 ಐಪಿಸಿ" ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಕಳ್ಳತನದಿಂದ ಮಣ್ಣನ್ನು ಸಾಗಿಸುತ್ತಿದ್ದ ಕೆಎ-06 ಎಬಿ-643 ನೇ ಲಾರಿಯನ್ನು ಠಾಣೆಗೆ ತಂದಿದ್ದು, ಸದರಿ ಲಾರಿಯ ಮಾಲೀಕನನ್ನು, ಚಾಲಕನನ್ನು ಹಾಗೂ ಜಮೀನಿನ ಮಾಲೀಕರಾದ ಉಮೇಶ್ ಬಿನ್ ಸಿದ್ದಪ್ಪ ರವರನ್ನು ದಸ್ತಗಿರಿ ಮಾಡಬೇಕಾಗಿರುತ್ತದೆ.

ಪೊಲೀಸ್ ಅಧೀಕ್ಷಕರ ಕಛೇರಿ,
ತುಮಕೂರು,

ದಿನಾಂಕ: 02.೧1.೨೦೨೩

<u>ಪತ್ರಿಕಾ ಪ್ರಕಟಣೆ.</u>

ದಿನಾಂಕ:–29–10–2023ರ ರಾತ್ರಿ 11–30 ಸುಮಾರಿಗೆ ದ್ರುವ ಮತ್ತು ಪ್ರದೀಪ ಎಂಬ ಹೋಟೆಲ್ ಕಾರ್ಮಿಕರು ಹೋಟೇಲ್ ಕೆಲಸ ಮುಗಿಸಿ ಮನೆಗೆ ನಡೆದುಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ಅಶೋಕ ರಸ್ತೆಯ ಪರಿಮಳ ಹೋಟೇಲ್ ಬಳಿ ಇಬ್ಬರೂ ಅಪರಿಚಿತ ವ್ಯಕ್ತಿಗಳು ಹರಿತವಾದ ಡ್ರಾಗನ್ ತೋರಿಸಿ ದ್ರುವ ಎನ್ನುವರ ಬಳಿ ಯಿಂದ ಮೊಬೈಲ್ ಕಿತ್ತುಕೊಂಡು ಹೋಗಿರುತ್ತಾರೆ. ಈ ಬಗ್ಗೆ ಅಲ್ಲೆ ಅಶೋಕರಸ್ತೆಯಲ್ಲಿ ಬೀಟ್ ಕರ್ತವ್ಯದಲ್ಲಿದ್ದ ಪೊಲೀಸರಿಗೆ ಮಾಹಿತಿ ಬಂದಿದ್ದು ಆ ಅಪರಿಚಿತ ಸುಲಿಗೆ ಕೋರರನ್ನ ಬೆನ್ನತ್ತಿ ಹೋಗಲಾಗಿ ಖಾಸಗಿ ಬಸ್ ನಿಲ್ದಾಣದ ಹತ್ತಿರ ಎಸ್.ಆರ್.ಎಸ್ ಆಫೀಸ್ ಮುಂಭಾಗ ಅವರನ್ನು ಸುತ್ತುವರೆಯಲಾಗಿ ಅದರಲ್ಲಿ ಒಬ್ಬಾತ ಹರಿತವಾದ ಡ್ರಾಗನ್ ನಿಂದ ಬೀಟ್ ಪೊಲೀಸ್ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿ ಅಲ್ಲಿ ಸೇರಿದ್ದ ಸಾರ್ವಜನಿಕರಿಗೂ ಡ್ರಾಗನ್ ತೋರಿಸಿ ತಿವಿಯಲು ಪ್ರಯತ್ನಪಟ್ಟಾಗ ಅದನ್ನು ತಡೆಯಲು ಮುಂದಾದ .ಎ.ಎಸ್.ಐ ಮಲ್ಲೇಶ್ ರವರಿಗೆ ಡ್ರಾಗನ್ ನಿಂದ  ಕೊಲೆ ಮಾಡಲು ಪ್ರಯತ್ನ ಪಟ್ಟಿರುತ್ತಾರೆ. ಅವರು ತಪ್ಪಿಸಿಕೊಂಡಾಗ ಬೀಟ್ ಸಿಬ್ಬಂದಿ ಮಂಜುನಾಥ್ ಬಿ ಗೌಡರ್ ರವರಿಗೆ ಎಡಗೈ ಹೆಬ್ಬೇರಳಿಗೆ ಗಾಯವಾಗಿದ್ದು ನಂತರ ಇತರ ಅಧಿಕಾರಿ ಮತ್ತು ಸಿಬ್ಬಂದಿಗಳ ಮತ್ತು ಸಾರ್ವಜನಿಕರ ಸಹಾಯದಿಂದ ಆರೋಪಿತರನ್ನ ವಶಕ್ಕೆ ಪಡೆದಿರುತ್ತದೆ. ಅಪರಿಚಿತ ಆರೋಪಿತರ ಹೆಸರು ವಿಚಾರಿಸಲಾಗಿ ಅವರ ಹೆಸರುಗಳು ಮಧುಸೂದನ್ @ ಮೋದಾ ಮತ್ತು ಮಂಜುನಾಥ @ ಕಳ್ಳಮಂಜ ಎಂಬ ಅಪರಾಧಿಕ ಹಿನ್ನೆಲೆವುಳ್ಳ ವ್ಯಕ್ತಿಗಳಾಗಿದ್ದು ಮಧುಸೂದನ್ @ ಮೋದನು ಈ ಹಿಂದೆ ಕೊಲೆ ಮತ್ತು ಹಲ್ಲೆ ಪ್ರಕರಣಗಳಲ್ಲಿ ಆರೋಪಿತನಾಗಿದ್ದು ಇತ್ತೀಚೇಗೆ ಅಷ್ಟೆ ಬಂಧಿಖಾನೆಯಿಂದ ಹೊರಬಂದವನಾಗಿರುತ್ತಾನೆ. ಇನ್ನೊಬ್ಬ ಆರೋಪಿತನಾದ ಮಂಜುನಾಥ @ ಕಳ್ಳಮಂಜನು ಈ ಹಿಂದೆ ಕ್ರಿಮಿನಲ್ ಪ್ರವೃತ್ತಿಯ ಹಿನ್ನೇಲೆವುಳ್ಳವನಾಗಿರುತ್ತಾನೆ. ತುಮಕೂರು ನಗರ ಠಾಣೆಯಲ್ಲಿ ತನಿಖೆ ಪ್ರಗತಿಯಲ್ಲಿರುತ್ತದೆ. ಆರೋಪಿ ಪತ್ತೆ ಕಾರ್ಯಕ್ಕೆ ಮಾನ್ಯ ಪೊಲೀಸ್ ಅಧೀಕ್ಷಕರಾದ ಶ್ರೀ ಅಶೋಕ್ ರವರು ಶ್ಲಾಘಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಕಚೇರಿ
ತುಮಕೂರು.

ಪತ್ರಿಕಾ ಪ್ರಕಟಣೆ.

ದಿನಾಂಕ. 02–11–2023

**"ಮಹಿಳೆ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಬರ್ಭರವಾಗಿ ಕೊಲೆ ಮಾಡಿದ್ದ ಆರೋಪಿ ಬಂಧನ."**

ತುರುವೇಕೆರೆ ತಾಲ್ಲೂಕು, ದಂಡಿನಶಿವರ ಪೊಲೀಸ್ ಠಾಣೆಯ ವ್ಯಾಪ್ತಿಯ ಕೋಡಿಹಳ್ಳಿ ಗ್ರಾಮದಲ್ಲಿ ದಿನಾಂಕ:–25/10/2023 ರಂದು ಸಂಜೆ 4:45 ಗಂಟೆ ಸಮಯದಲ್ಲಿ ಕೋಡಿಹಳ್ಳಿ ಗ್ರಾಮದ ಗಂಗಾಧರಯ್ಯ ಎಂಬುವವರ ತೋಟದ ಬಳಿ ಕಾವ್ಯ.ಎ.ಎಸ್ ಕೋಂ ಗಿರಿಶ್ ಕೆ.ಹೆಚ್, 30 ವರ್ಷ ಎಂಬುವರು ಹಸುವನ್ನು ಮೇಯಿಸುತ್ತಿರುವಾಗ ಇದೇ ಗ್ರಾಮದ ದಿಲೀಪ್ ಬಿನ್ ಲೇಟ್ ಶಂಕರಯ್ಯ ಈತನು ಹಳೆ ವೈಷಮ್ಯದ ಹಿನ್ನೆಲೆಯಲ್ಲಿ ಕಾವ್ಯ.ಎ.ಎಸ್ ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಹಲ್ಲೆ ಮಾಡಿ ಕಲ್ಲುಗಳಿಂದ ಮುಖದ ಮೇಲೆ ಎತ್ತಿ ಹಾಕಿ ಜಜ್ಜಿ ಕೊಲೆ ಮಾಡಿದ್ದು, ಆರೋಪಿ ದಿಲೀಪ್ ಯಾರಿಗೂ ಸಿಗದಂತೆ ತಲೆ ಮರೆಸಿಕೊಂಡಿದ್ದನು. ಈ ಸಂಬಂಧ ದಂಡಿನಶಿವರ ಪೊಲೀಸ್ ಠಾಣೆಯಲ್ಲಿ ಮೊ.ನಂ–80/2023 ಕಲಂ–302, 201 ಐ.ಪಿ.ಸಿ ಪ್ರಕರಣ ದಾಖಲಾಗಿರುತ್ತೆ.

ಆರೋಪಿ ಪತ್ತೆ ಬಗ್ಗೆ ವಿಶೇಷ ಕಾರ್ಯಚರಣೆಯ ಕೈಗೊಂಡು ಪ್ರಕರಣದಲ್ಲಿ ಕೊಲೆ ಮಾಡಿದ್ದ ಆರೋಪಿಯನ್ನು ದಸ್ತಗಿರಿ ಮಾಡಿ ಕೊಲೆ ಮಾಡಿದ ಆರೋಪಿಗೆ ಆಶ್ರಯ ನೀಡಿ ತಪ್ಪಿಸಿಕೊಳ್ಳಲು ಸಹಾಯ ಮಾಡಿದ್ದ ಮತ್ತೊಬ್ಬ ಆರೋಪಿಯನ್ನೂ ಸಹ ದಸ್ತಗಿರಿ ಮಾಡಿ ಘನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆ.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಮರಿಯಪ್ಪ ರವರ ಮಾರ್ಗದರ್ಶನದಲ್ಲಿ, ಕುಣಿಗಲ್ ಉಪವಿಭಾಗ ಪೊಲೀಸ್ ಉಪಾಧೀಕ್ಷಕರಾದ ಲಕ್ಷ್ಮೀಕಾಂತ್ ರವರ ನೇತೃತ್ವದಲ್ಲಿ ತುರುವೇಕೆರೆ ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ಆದ ಲೋಹಿತ್ ಬಿ.ಎನ್, ದಂಡಿನಶಿವರ ಠಾಣಾ ಪಿ.ಎಸ್.ಐ ರವರಾದ, ರಾಮಚಂದ್ರಯ್ಯ, ಚಿತ್ತರಂಜನ್, ತುರುವೇಕೆರೆ ಠಾಣಾ ಪಿ.ಎಸ್.ಐ ಆದ ರಾಮಚಂದ್ರಪ್ಪ, ಎ.ಎಸ್.ಐ ರವರುಗಳಾದ ಗಂಗಣ್ಣ, ನಾರಾಯಣಪ್ಪ, ನಾಗರಾಜು, ಸಿಬ್ಬಂದಿಗಳಾದ ಮಂಜುನಾಥ್, ಗುರುಮೂರ್ತಿ, ಕುಮಾರ್, ಲಕ್ಷ್ಮಪ್ಪ, ಇಬ್ರಾಹಿಂ ಆರೋಪಿ ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದು, ಪೊಲೀಸ್ ಅಧೀಕ್ಷಕರಾದ ಅಶೋಕ್ ಕೆ.ವಿ. ಐ.ಪಿ.ಎಸ್. ರವರು ತನಿಖಾ ತಂಡವನ್ನು ಶ್ಲಾಘಿಸಿರುತ್ತಾರೆ.

ಪೊಲೀಸ್ ಅಧೀಕ್ಷಕರ ಕಛೇರಿ,
ತುಮಕೂರು,

## <u>ಪತ್ರಿಕಾ ಪ್ರಕಟಣೆ.</u>

ದಿನಾಂಕ: ೩೦.೧೦.೨೦೨೩

ದಿನಾಂಕ: 16.10.2023 ರಂದು ಸಂಜೆ 5.30 ಗಂಟೆಯಲ್ಲಿ ಮಣಿಕಂಠ ಎಂಬುವರಿಗೆ ಮೋಸ ಮಾಡುವ ಉದ್ದೇಶದಿಂದ ಅಜ್ಜಿ ಮತ್ತು ಮತ್ತೊಬ್ಬ ಆಸಾಮಿ ನಕಲಿ ಚಿನ್ನದ ಓಲೆಗಳನ್ನು ತೋರಿಸಿ ಹಣವನ್ನು ಕೊಡಲು ಕೋರಿದ್ದು, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿದ್ದ ಪೊಲೀಸರನ್ನು ನೋಡಿ ಅಜ್ಜಿಯ ಜೊತೆಯಲ್ಲಿದ್ದವನು ಓಡಿ ಹೋಗಿದ್ದು, ಅಜ್ಜಿಯನ್ನು ಪೊಲೀಸರೊಂದಿಗೆ ಠಾಣೆಗೆ ಕರೆದುಕೊಂಡು ಬಂದು ತುಮಕೂರು ನಗರ ಪೊಲೀಸ್ ಠಾಣಾ ಮೊ.ನಂ. 445/2023 ಕಲಂ 393, 420 ರೆ/ವಿ 34 ಐ ಪಿ.ಸಿ. ರೀತ್ಯ ಪ್ರಕರಣವನ್ನು ದಾಖಲಿಸಿ ತನಿಖೆ ಕೈಗೊಂಡಿದ್ದು, ನಂತರ ಈ ಕೃತ್ಯದಲ್ಲಿ ಭಾಗಿಯಾಗಿದ್ದ **ಶೇಷಮ್ಮ ಕೋಂ ಲೇ:ಹನುಮಂತಪ್ಪ**, 65 **ವರ್ಷ, ಚಿಕ್ಕಬೆನ್ನೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ** ರವರನ್ನು ದಸ್ತಗಿರಿ ಮಾಡಿರುತ್ತೆ,

ಓಡಿ ಹೋಗಿದ್ದ ವೆಂಕಟೇಶ ರವರನ್ನು ಪತ್ತೆ ಮಾಡಲು ತಂಡವನ್ನು ರಚಿಸಿದ್ದು, ದಿನಾಂಕ: 28–10–2023 ರಂದು ಆರೋಪಿಯಾದ **ವೆಂಕಟೇಶ್ ಬಿನ್ ನಾಗರಾಜು**, 45 **ವರ್ಷ, ಚಿಕ್ಕಬೆನ್ನೂರು, ಚನ್ನಗಿರಿ ತಾ, ದಾವಣಗೆರೆ ಜಿಲ್ಲೆ** ರವರನ್ನು ತುಮಕೂರು ಬಸ್ ನಿಲ್ದಾಣದಲ್ಲಿ, ದಸ್ತಗಿರಿ ಮಾಡಿ ಆತನಿಂದ ತುಮಕೂರು ನಗರ ಪೊಲೀಸ್ ಠಾಣೆಗೆ ಸಂಬಂಧಿಸಿದ 04 ಪ್ರಕರಣಗಳಲ್ಲಿನ **ಚಿನ್ನದ ಓಲೆಗಳು, ಚಿನ್ನದ ಬಳೆ, ಚಿನ್ನದ ಮಾಂಗಲ್ಯ ಸರ ಸೇರಿ ಒಟ್ಟು** 5,00,000/– **ರೂ ಮೌಲ್ಯದ ವಡವೆಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿರುತ್ತೆ**.

ಈ ಕೇಸಿನಲ್ಲಿ ಹೆಚ್ಚುವರಿ ಪೊಲೀಸ್ಅಧೀಕ್ಷಕರಾದ ವಿ.ಮರಿಯಪ್ಪ ರವರ ಮಾರ್ಗದರ್ಶನದಲ್ಲಿ ಹಾಗೂ ತುಮಕೂರು ನಗರ ಉಪವಿಭಾಗದ, ಡಿ.ಎಸ್.ಪಿ ಚಂದ್ರಶೇಖರ್ ರವರ ನೇತೃತ್ವದಲ್ಲಿ, ತುಮಕೂರು ನಗರ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕರಾದ ದಿನೇಶ್ ಕುಮಾರ್, ಅಪರಾಧ ವಿಭಾಗದ ಪಿ.ಎಸ್.ಐ. ಭಾರತಿ, ಎ.ಎಸ್.ಐ. ಮಲ್ಲೇಶ್, ಹೆಚ್.ಸಿ. ಮಂಜುನಾಥ್, ನಯಾಜ್ ಅಹಮದ್ ಹಾಗೂ ಪಿ.ಸಿ.ಗಳಾದ ಚೇತನ್, ಶಿವಕುಮಾರ್ ರವರ ಪತ್ತೆ ತಂಡವನ್ನು ಮಾನ್ಯ ಪೊಲೀಸ್ ಅಧೀಕ್ಷಕರಾದ ಅಶೋಕ್ ಕೆ.ವಿ ಐ.ಪಿ.ಎಸ್, ರವರು ಶ್ಲಾಘಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಕಚೇರಿ
ತುಮಕೂರು.